ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಕೊಲಂಬೋದಲ್ಲಿ ಶ್ರೀಲಂಕಾ ವಿರುದ್ಧ ನಡೆಯುತ್ತಿರುವ 2ನೇ ಟೆಸ್ಟ್ ಪಂದ್ಯದಲ್ಲಿ ಅಜೇಯ ಶತಕ (115 ರನ್) ಗಳಿಸಿದ ಭಾರತದ ಧ್ರುವ್ ಜುರೇಲ್ ಸಂಭ್ರಮಿಸಿದ ಕ್ಷಣ... ಭಾರತ 9 ವಿಕೆಟ್ ನಷ್ಟಕ್ಕೆ 503ಕ್ಕೆ ಡಿಕ್ಲೇರ್ ಮಾಡಿಕೊಂಡಿತು.

25 ಆಗಸ್ಟ್, 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -163 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಹಳೆ ಫ್ಯಾಷನ್ ಅಪ್ಪಿಕೊಂಡ ಹೊಸ ಜೆನ್ » 2


ಮತದಾರರ ಪಟ್ಟಿ ಹೆಸರು ಖಚಿತ ಪಡಿಸಿಕೊಳ್ಳಿ » 3


ರಾಜ್ಯದಲ್ಲಿ 1.7 ಕೋಟಿ ಮತದಾರರು ಡಿಲೀಟ್ » 4

# ಅವಧಿಗೂ ಮೊದಲೇ ಅಧಿವೇಶನಕ್ಕೆ ತೆರೆ

## ವಿಪಕ್ಷಗಳ ಅಹೋರಾತ್ರಿ ಧರಣಿಗೆ ಹೆದರಿದ ಆಡಳಿತ ಪಕ್ಷ | ವಾಲ್ಮೀಕಿ ಹಗರಣಕ್ಕೆ ಕಲಾಪ ಬಲಿ

• ಪ್ರಜೋದಯ ವರದಿ

**ಬೆಂಗಳೂರು:** ವಾಲ್ಮೀಕಿ ನಿಗಮ ಹಗರಣ ಸಂಬಂಧ ಸಚಿವ ಬಿ.ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ವಿಪಕ್ಷಗಳ ತೀವ್ರ ಪ್ರತಿಭಟನೆಗೆ ಸಾಕ್ಷಿಯಾದ ಕರ್ನಾಟಕ ವಿಧಾನಮಂಡಲ ಅಧಿವೇಶನಕ್ಕೆ 3 ದಿನಗಳ ಮೊದಲೇ ತೆರೆ ಬಿದ್ದಿದೆ.

ಆಗಸ್ಟ್ 13 ರಿಂದ 27ರವರೆಗೆ ಅಧಿವೇಶನ ನಡೆಸಲು ಆರಂಭದಲ್ಲಿ ತೀರ್ಮಾನಿಸಲಾಗಿತ್ತು. ಆದರೀಗ ಮೂರು ದಿನಗಳ ಮುಂಚಿತವಾಗಿ ಸೋಮವಾರವೇ ವಿಧಾನಸಭೆ ಮತ್ತು ಪರಿಷತ್ ಕಲಾಪಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು. ಉಭಯ ಸದನದಲ್ಲಿ ಅಹೋರಾತ್ರಿ ಧರಣಿಗೆ ಬಿಜೆಪಿ ಮುಂದಾಗಿತ್ತು. ಅಹೋರಾತ್ರಿ ಧರಣಿಯನ್ನು ತಪ್ಪಿಸುವ ಉದ್ದೇಶದಿಂದ ಆಡಳಿತ ಪಕ್ಷ ಸದನವನ್ನು ಮೊಟಕುಗೊಳಿಸುವ ನಿರ್ಧಾರಕ್ಕೆ ಬಂದಿತ್ತು. ಅದರಂತೆ ಸ್ಪೀಕರ್ ಜೆ.ಎಸ್.ಪಾಟೀಲ್ ಅವರು ಸದನವನ್ನು ಮುಂದೂಡಿದರು.

ಕಳೆದ 8 ದಿನಗಳಲ್ಲಿ ಬಿಜೆಪಿ ವಾಲ್ಮೀಕಿ ನಿಗಮದ ಹಗರಣವನ್ನು ಇಟ್ಟುಕೊಂಡು ಹೋರಾಟ ನಡೆಸಿತ್ತು. ಇತರೆ ಯಾವುದೇ ವಿಚಾರಗಳ ಬಗ್ಗೆ ಚರ್ಚೆಗೆ ಮುಂದಾಗಿರಲಿಲ್ಲ. ಬಿ ನಾಗೇಂದ್ರ ರಾಜೀನಾಮೆ ನೀಡಲೇಬೇಕೆಂದು ಬಿಜೆಪಿ ಪಟ್ಟು ಹಿಡಿದು, ರಾಜೀನಾಮೆ ನೀಡದೆ ಬೇರೆ ವಿಚಾರಗಳ ಬಗ್ಗೆ ಚರ್ಚೆ ನಡೆಸಲು ನಾವು ಸಿದ್ಧವಿಲ್ಲವೆಂಬ ವಿಚಾರವನ್ನು ಸ್ಪಷ್ಟಪಡಿಸಿತ್ತು. ಹಾಗಾಗಿ ಸದನ ಆರಂಭವಾಗುತ್ತಿದ್ದಂತೆ ಘೋಷಣೆ ಮೂಲಕ ಅಡ್ಡಿಪಡಿಸಿ, ಸದನದ ಬಾವಿಗಿಳಿಯದೆ ಈ ಬಾರಿ ಭಿನ್ನವಾಗಿ ಪ್ರತಿಭಟನೆ ನಡೆಸಲಾಗಿತ್ತು.



**ರಾಜ್ಯಪಾಲರಿಗೆ ದೂರು ಸಲ್ಲಿಕೆ**
ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ವಿಧಾನಸೌಧದಿಂದ ಲೋಕಭವನಕ್ಕೆ ಬಿಜೆಪಿ ಶಾಸಕರು ಪಾದಯಾತ್ರೆ ನಡೆಸಿದ್ದು, ಸಚಿವ ನಾಗೇಂದ್ರ ವಿಚಾರವಾಗಿ ರಾಜ್ಯಪಾಲರಿಗೆ ದೂರು ಸಲ್ಲಿಕೆ ಮಾಡಿದ್ದಾರೆ. ಈ ವೇಳೆ ಜೆಡಿಎಸ್ ಶಾಸಕರೂ ಇದ್ದರು.

**ರಾಜೀನಾಮೆಗೆ ಒಪ್ಪದ ನಾಗೇಂದ್ರ**

ಇಷ್ಟೆಲ್ಲಾ ಬೆಳವಣಿಗೆಗಳು ನಡೆದರೂ ಬಿ ನಾಗೇಂದ್ರ ರಾಜೀನಾಮೆಗೆ ಒಪ್ಪಿಗೆ ನೀಡಲಿಲ್ಲ. ಸರ್ಕಾರ ಕೂಡಾ ಸಚಿವರನ್ನು ಸಮರ್ಥನೆ ಮಾಡಿಕೊಂಡಿದೆ. ಜೊತೆಗೆ ಕೆಲವೊಂದು ಪ್ರಮುಖ ವಿಧೇಯಕಗಳು ಅಂಗೀಕಾರಗೊಂಡಿವೆ. ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಸೋಮವಾರ ಪ್ರತಿಭಟನೆ ಹಮ್ಮಿಕೊಂಡಿತ್ತು. ವಿಧಾನಸೌಧ ಮುತ್ತಿಗೆಗೆ ಪ್ರಯತ್ನ ನಡೆಸಿತ್ತು. ಈ ವೇಳೆ ನಾಯಕರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು.

**ವಿಪಕ್ಷಗಳಿಗೆ ಹೆದರಿ ಸರ್ಕಾರ ಓಡಿದೆ: ಅಶೋಕ್**
ರಾಜ್ಯ ಸರ್ಕಾರದ ನಡೆ ವಿರುದ್ಧ ವಿಧಾನ ಸಭೆಯ ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದ್ದು, 20-30 ವರ್ಷಗಳಲ್ಲಿ ಮೊದಲ ಬಾರಿ ವಿಪಕ್ಷಗಳಿಗೆ ಹೆದರಿ ಸರ್ಕಾರ ಓಡಿದೆ. ಸಭಾಧ್ಯಕ್ಷರು ಸರಿಯಾದ ರೀತಿ ಸದನವನ್ನೇ ನಡೆಸಿಲ್ಲ. ಕಾಂಗ್ರೆಸ್ ರಾಜಕೀಯ ಮಾಡಬಹುದು, ನಾವು ಮಾಡಲ್ಲ. ದಲಿತರ ಹಣ ನುಂಗಿದ್ದಾರೆ, ಆ ಹಣ ವಾಪಸಾಗಬೇಕು. ಶೇ.5ರಷ್ಟು ಪಾರ್ಕ್‌ಗಳನ್ನು ಲೂಟಿ ಮಾಡುವುದಕ್ಕೆ ಹೊರಟಿದ್ದಾರೆ ಕಿಡಿ ಕಾರಿದರು.

**7042.69 ಕೋ.ರೂ.ಅಂದಾಜು ಮಂಡನೆ**

7042.69 ಕೋ.ರೂ.ಮೊದಲ ಕಂತಿನ ಪೂರಕ ಅಂದಾಜು ಮಂಡನೆ ಮಾಡಲಾಯಿತು. ಯಾವುದೇ ಚರ್ಚೆ ಇಲ್ಲದೆ ಪೂರಕ ಅಂದಾಜಿಗೆ ಅನುಮೋದನೆ ದೊರಕಿದೆ. ಮಾಜಿ ಸಚಿವ ಡಿ. ಸುಧಾಕರ್ ವೈದ್ಯಕೀಯ ವೆಚ್ಚ ಮರುಪಾವತಿ 1.20 ಕೋ.ರೂ., ಸಚಿವರ ಪ್ರಮಾಣ ವಚನ ವೆಚ್ಚ 38.25 ಲ.ರೂ.,ಎಸ್ ಐಆರ್ 37+20 = 57 ಕೋ. ರೂ. ವೆಚ್ಚಕ್ಕೆ ಅನುಮೋದನೆ ಸಿಕ್ಕಿದೆ.

ಅಲ್ಲದೆ, ಎಸ್ ಐಆರ್ ನಡೆಸಲು ಖರ್ಚು, ಕುಮಾರ ಕೃಪ ಅತಿಥಿ ಗೃಹ ನವೀಕರಣಕ್ಕೆ 79.50 ಲ.ರೂ ಹಾಗೂ ಶಾಲಾ ಕಾಲೇಜುಗಳ ಉಚಿತ ಬಸ್ ಪಾಸ್ ಬಿಎಂಟಿಸಿಗೆ 16.62. ಕೋ. ರೂ.,ಕೆಎಸ್‌ಆರ್‌ಟಿಸಿ, ಎನ್ ಡಬ್ಲ್ಯೂಸ್‌ಆರ್‌ಟಿಸಿ ಸೇರಿ 63.99 ಕೋ. ರೂ, ವಿಬಿಜಿ ರಾಮ್ ಜಿ 1169 ಕೋ.ರೂ. ರಾಜ್ಯದ ಪಾಲಿನ ಅನುದಾನ ಹಂಚಿಕೆ ಮಾಡಲಾಗಿದೆ.

ಗ್ರಾಮೀಣ ಪ್ರದೇಶದ ತುರ್ತು ಕುಡಿಯುವ ನೀರಿಗೆ 289 ಕೋ.ರೂ ಹಂಚಿಕೆ. ಭಾರತ್ ಜೋಡೋ ಯುವಕರ ಸಂಘ ಸ್ಥಾಪನೆಗೆ 791 ಕೋ.ರೂ. ಹಂಚಿಕೆ. ತುಮಕೂರು ಜಿಲ್ಲಾ ಗ್ಯಾರಂಟಿ ಸಮಾವೇಶಕ್ಕೆ 5.00 ಕೋ.ರೂ. ನೀಡಲಾಗಿದೆ.

## ಗ್ರಾ.ಪಂ. ಮೀಸಲಾತಿ ವಿರೋಧಿಸಿ ಜೆಡಿಎಸ್ ಪ್ರತಿಭಟನೆ




• ಪ್ರಜೋದಯ ವರದಿ

**ಹಾಸನ:** ಗ್ರಾಮ ಪಂಚಾಯಿತಿ ಮೀಸಲಾತಿ ನಿಗದಿಯಲ್ಲಿ ಜಿಲ್ಲಾಧಿಕಾರಿ ತಾರತಮ್ಯ ಮಾಡಿದ್ದಾರೆಂದು ಆರೋಪಿಸಿ ಜಿಲ್ಲಾ ಜೆಡಿಎಸ್‌ನಿಂದ ಸೋಮವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಹೇಮಾವತಿ ಪ್ರತಿಮೆ ಬಳಿಯಿಂದ ಮೆರವಣಿಗೆಯಲ್ಲಿ ಹೊರಟ ಪ್ರತಿಭಟನಾಕಾರರು ಎನ್.ಆರ್. ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿದರು. ಸರ್ಕಾರದ ಮಾರ್ಗಸೂಚಿ ಮತ್ತು ಅಧಿಸೂಚನೆಯಂತೆ ಮೀಸಲಾತಿ ನಿಗದಿ ಪಡಿಸದೆ ಅವೈಜ್ಞಾನಿಕವಾಗಿ ಮೀಸಲಾತಿ ಪ್ರಕಟಿಸಲಾಗಿದೆ. ಕಾಂಗ್ರೆಸ್ ಏಜೆಂಟರಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ವರ್ತಿಸುತ್ತಿದ್ದಾರೆಂದು ಧಿಕ್ಕಾರ ಕೂಗಿದರು. ಮನವಿ ಸ್ವೀಕರಿಸಲು ಹೆಚ್ಚುವರಿ ಜಿಲ್ಲಾಧಿಕಾರಿ ಆಗಮಿಸುತ್ತಾರೆಂದು ಪೊಲೀಸರು ತಿಳಿಸಿದಾಗ ಆಕ್ಷೇಪ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಜಿಲ್ಲಾಧಿಕಾರಿಯೇ ಬರಬೇಕೆಂದು ಪಟ್ಟು ಹಿಡಿದರು. ಕೆಲ ಹೊತ್ತಿನ ಬಳಿಕ ಜಿಲ್ಲಾಧಿಕಾರಿಯೇ ಮನವಿ ಸ್ವೀಕರಿಸಿ, ಸಮಗ್ರ ಪರಿಶೀಲನೆ ನಡೆಸಿ ತಪ್ಪಾಗಿದ್ದರೆ ತಿದ್ದಿಕೊಳ್ಳಲಾಗುವುದೆಂದು ಭರವಸೆ ನೀಡಿದರು.

ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಮಾತನಾಡಿ, ಪ್ರಕಟವಾಗಿರುವ ಮೀಸಲಾತಿಯಿಂದ ಹಲವೆಡೆ ಗೊಂದಲ ಉಂಟಾಗಿದ್ದು, ಸ್ಥಳೀಯ ಜನಪ್ರತಿನಿಧಿಗಳು ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಆಕ್ಷೇಪಣೆಗಳಿಗೆ ಸ್ಪಂದನೆ ಸಿಕ್ಕಿಲ್ಲ ಎಂದರು.

ಮೀಸಲಾತಿಯಲ್ಲಿ ಸಾಮಾಜಿಕ ನ್ಯಾಯ ಪಾಲಿಸಿಲ್ಲ. ಸಕಲೇಶಪುರ ತಾಲ್ಲೂಕಿನ ಹಲಸುಲಿಗೆಯಲ್ಲಿ ಅಂದಾಜು 70 ಮುಸ್ಲಿಂ ಕುಟುಂಬಗಳಿವೆ. ಆದರೆ, ಅವರಿಗೆ ಪ್ರಾತಿನಿಧ್ಯ ನೀಡಿಲ್ಲ. ಸರ್ಕಾರದ ಮಾರ್ಗಸೂಚಿಯನ್ನು ಜಿಲ್ಲಾಧಿಕಾರಿ ಸ್ಪಷ್ಟವಾಗಿ ಉಲ್ಲಂಘಿಸಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಿದೆಯೋ ಅಥವಾ ಕೆಳಮಟ್ಟದಲ್ಲಿ ಯಾರಾದರೂ

» ನಾಲ್ಕನೇ ಪುಟದಲ್ಲಿ

# ಅಧಿಕಾರಿಗಳ ಮನೋಬಲ ಕುಗ್ಗಿಸುವ ಪ್ರಯತ್ನ

## ಹಿರಿಯರಿದ್ದೀರಿ ಮಹಿಳೆಯರನ್ನು ಗೌರವಿಸಿ | ಹೆಚ್.ಡಿ.ರೇವಣ್ಣಗೆ ಡಿ.ಸಿ.ತಿರುಗೇಟು

• ಪ್ರಜೋದಯ ವರದಿ

**ಹಾಸನ:** ಅಸಂಬದ್ಧ ಪದ ಬಳಸಿ ಅಧಿಕಾರಿಗಳ ಮನೋಬಲ ಕುಗ್ಗಿಸುವ ಪ್ರಯತ್ನ ಸರಿಯಲ್ಲ, ನಾನು ಯಾವ ಕಾರಣಕ್ಕೂ ಅವರ ನಿಂದನಾತ್ಮಕ ಮಾತುಗಳಿಂದ ದುರ್ಬಲಳಾಗುವುದಿಲ್ಲವೆಂದು ಮಾಜಿ ಸಚಿವ ಹೆಚ್. ಡಿ. ರೇವಣ್ಣ ಅವರಿಗೆ ಜಿಲ್ಲಾಧಿಕಾರಿ ಕೆ. ಎಸ್.ಲತಾಕುಮಾರಿ ಅವರು ತೀಕ್ಷ್ಣವಾಗಿ ತಿರುಗೇಟು ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ಮೀಸಲಾತಿ ಪಟ್ಟಿ ವಿಚಾರವಾಗಿ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ನನ್ನ ಕುರಿತು ಬಳಸಿದ ಪದಗಳು ನೋವುಂಟು ಮಾಡಿದೆ. ಪ್ರತಿ ಮೂರ್ನಾಲ್ಕು ತಿಂಗಳಿಗೊಮ್ಮೆ ಸುದ್ದಿಗೋಷ್ಠಿ ನಡೆಸಿ ಅಧಿಕಾರಿಗಳ ಕುರಿತು ತುಂಬಾ ತುಚ್ಛವಾಗಿ ಮಾತನಾಡುವುದುನ್ನು ಕೇಳಿದ್ದೇನೆ. ಈ ಹಿಂದೆಯೂ ಹೀಗೆ ಮಾಡಿದ್ದಾರೆಂದು ತಿಳಿದಿದೆ. ಅವರು ಮಾಜಿ ಸಚಿವರು, ಅನುಭವಿಗಳಿದ್ದಾರೆ. ಅಧಿಕಾರಿಗಳು ತಪ್ಪು ಮಾಡಿದ್ದರೆ ಸರಿದಾರಿಗೆ ತರುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ನಮ್ಮಿಂದ ತಪ್ಪುಗಳಾಗಿಲ್ಲವೆಂದು ಹೇಳುವುದಿಲ್ಲ. ಆದರೆ, ಲೋಪ ಸರಿಪಡಿಸಿಕೊಳ್ಳಲು ಅವಕಾಶ ನೀಡಬೇಕು. ವೈಯಕ್ತಿಕ ತೇಜೋವಧೆ ಮಾಡುವುದು ಅವರ ಘನತೆಗೆ ಶೋಭೆಯಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

**ಹೆಣ್ಣಿಗೆ ಗೌರವ ಇಲ್ಲವೇ?**

ಹೆಣ್ಣು ಶಿಕ್ಷಣ ಪಡೆದರೆ ಗೌರವ ಎನ್ನುತ್ತಿದ್ದರು. ಸಾಕಷ್ಟು ಸವಾಲುಗಳ ಮಧ್ಯೆ ವ್ಯಾಸಂಗ ಮಾಡಿ ಉನ್ನತ ಹುದ್ದೆ ಗಿಟ್ಟಿಸಿಕೊಂಡು ಜಿಲ್ಲಾಧಿಕಾರಿಯಾದರೂ ಅಗೌರವ ತೋರಿಸುತ್ತಾರೆಂದರೆ ಮಹಿಳೆಯರು ಇನ್ನು ಏನು ಸಾಧನೆ ಮಾಡಬೇಕೆಂದು ಅವರು ಪ್ರಶ್ನಿಸಿದರು.




**"ಗ್ರಾಮ ಪಂಚಾಯಿತಿ ಮೀಸಲಾತಿ ಪಟ್ಟಿ ಹೇಗೆ ಸೋರಿಕೆ ಆಯಿತು ಎಂಬುದು ಗೊತ್ತಿಲ್ಲ. ಈ ಸಂಬಂಧ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡುತ್ತೇನೆ. ವೈಯಕ್ತಿಕ ತೇಜೋವಧೆ ಬಿಟ್ಟು ಸಹಿಷ್ಣುತೆಯಿಂದ ಇರುವಂತೆ ಹಿರಿಯರಲ್ಲಿ ಕೋರುತ್ತೇನೆ.**
**-ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ**

ನಾವು ನಮ್ಮದೇಯಾದ ಚೌಕಟ್ಟಿನಲ್ಲಿ ಕೆಲಸ ಮಾಡುತ್ತೇವೆ. ಈ ರೀತಿ ಮಾತನಾಡಿದರೆ ಸಮಾಜಕ್ಕೆ ಯಾವ ಸಂದೇಶ ರವಾನೆಯಾಗುತ್ತದೆಂಬ ಅರಿವಿರಬೇಕು. ಯಾರೋ ನಮ್ಮನ್ನು ಹಿಡಿದುಕೊಂಡು ಬಂದು ಈ ಸ್ಥಾನದಲ್ಲಿ ಕೂರಿಸಿಲ್ಲ. ಸಾರ್ವಜನಿಕ ವೇದಿಕೆಯಲ್ಲಿ ಕೀಳುಮಟ್ಟದಲ್ಲಿ ಮಾತನಾಡುವುದು ಅವರ ಹಿರಿತನಕ್ಕೆ ಒಳ್ಳೆಯದಲ್ಲ. ಹೀಗಾಗಿಯೇ ಸಾಕಷ್ಟು ಅಧಿಕಾರಿಗಳು ಅವರ ಬಗ್ಗೆ ಮಾತನಾಡಲು ಭಯಪಡುತ್ತಾರೆಂದರು.

**ನಿಯಮ ಉಲ್ಲಂಘಿಸಿಲ್ಲ**

ಗ್ರಾಮ ಪಂಚಾಯಿತಿ ಮೀಸಲಾತಿ ಪ್ರಕಟಣೆ ವಿಚಾರದಲ್ಲಿ ನಿಯಮ ಉಲ್ಲಂಘನೆಯಾಗಿಲ್ಲ. ತಹಶೀಲ್ದಾರ್ ಆಗಲಿ, ಶಾಸಕರಾಗಲಿ ಮೀಸಲಾತಿ ನಿಗದಿ ಮಾಡುವುದಿಲ್ಲ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1998ರ ನಿಯಮ 3ರ ಅನ್ವಯ ಜಿಲ್ಲಾಧಿಕಾರಿಯೇ ಮೀಸಲಾತಿ ನಿಗದಿಪಡಿಸಬೇಕು. ತಹಶೀಲ್ದಾರ್ ಕೊಟ್ಟಿರುವ ಪಟ್ಟಿಯನ್ನೇ ಅಂತಿಮಗೊಳಿಸುವಂತಿಲ್ಲ. ಅವರು ತಮಗೆ ಬೇಕಾದ ಹಾಗೆ ಅಥವಾ ಯಾರದೋ ಒತ್ತಡಕ್ಕೆ ಮಣಿದು ತಯಾರಿಸಿರುವ ಪಟ್ಟಿಯನ್ನು ಕಣ್ಮುಚ್ಚಿ ಒಪ್ಪಿಕೊಳ್ಳುವುದು ಜಿಲ್ಲಾಧಿಕಾರಿ ಕೆಲಸ ಅಲ್ಲ. ಪಟ್ಟಿ ಅಂತಿಮಗೊಳಿಸುವುದು ಜಿಲ್ಲಾಧಿಕಾರಿಯ ಪರಮಾಧಿಕಾರವೆಂದರು.

ಆದರೂ ಏನಾದರೂ ಲೋಪಗಳಿದ್ದರೆ ಆಕ್ಷೇಪಣೆ ಸಲ್ಲಿಸಬಹುದು ಅಥವಾ ನ್ಯಾಯಾಲಯದ ಮೆಟ್ಟಿಲೇರ ಬಹುದು. ಮೀಸಲಾತಿ ಪಟ್ಟಿ ಬಗ್ಗೆ ಆಕ್ಷೇಪಿಸಲು ಕಾನೂನಿನಲ್ಲಿ ಅವಕಾಶ ಇಲ್ಲವಾದರೂ ಸರ್ಕಾರದ ಹಂತದಲ್ಲಿ ಚರ್ಚಿಸಲು ಅವಕಾಶಗಳಿವೆ. ಈಗ ಪ್ರಕಟಿಸಿರುವ ಪಟ್ಟಿಯೇ ಬಹುತೇಕ ಅಂತಿಮವಾಗುತ್ತದೆಂದರು.

ಕಾನೂನಿನಲ್ಲಿ ಗ್ರಾಮ ಪಂಚಾಯಿತಿ ಕ್ಷೇತ್ರ ಮೀಸಲಾತಿ ಪುನರಾವರ್ತನೆ ಆಗಬಾರದೆಂಬ ನಿಯಮವಿದೆ. ನಾವು ಗೊತ್ತುಪಡಿಸಿದ ಮೀಸಲಾತಿ ಅನ್ವಯ ಆ ಪಂಚಾಯಿತಿಯಲ್ಲಿ ನಿಗದಿತ ಅಭ್ಯರ್ಥಿ ಇಲ್ಲದಿದ್ದರೆ ಬೇರೆಯವರು ಸ್ಪರ್ಧಿಸಬಹುದು. ಆದಾಗ್ಯೂ ಪಟ್ಟಿಯಲ್ಲಿ ಸಮಸ್ಯೆಗಳಿರುವ ಕುರಿತು ಗಮನಕ್ಕೆ ತಂದರೆ ಪರಿಗಣಿಸಲಾಗುವುದೆಂದರು.

# ನಿಮ್ಮ ದುರಹಂಕಾರ ಮನೆಯಲ್ಲಿ ಇಟ್ಟುಕೊಳ್ಳಿ

## ನಾನು ನಿಮ್ಮಷ್ಟು ಓದಿಲ್ಲ, ಜನರ ಸೇವೆಯೇ ಧ್ಯೇಯ | ಡಿ.ಸಿ. ವಿರುದ್ಧ ರೇವಣ್ಣ ಗುಡುಗು

• ಪ್ರಜೋದಯ ವರದಿ

ಹಾಸನ : ನಾನು 30 ವರ್ಷದಿಂದ ಶಾಸಕನಾಗಿ ಕೆಲಸ ಮಾಡಿಕೊಂಡಿದ್ದೇನೆ. ಗೌರವ ಕೊಡುವುದನ್ನು ಅವರಿಂದ ಕಲಿಯುವ ಅವಶ್ಯಕತೆ ಇಲ್ಲ, ದುರಹಂಕಾರವನ್ನು ಅವರ ಮನೆಯಲ್ಲಿ ಇಟ್ಟುಕೊಳ್ಳಲಿ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ವಿರುದ್ಧ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ಮೀಸಲಾತಿ ನಿಗದಿ ವಿಚಾರದಲ್ಲಿ ಆಗಿರುವ ತಪ್ಪುಗಳನ್ನು ಮಾಧ್ಯಮದ ಮೂಲಕ ಹೇಳಿಕೊಂಡಿದ್ದೇನೆ. ಆ.18ರಂದು ನಾನು ಜಿಲ್ಲಾಧಿಕಾರಿ ಕಚೇರಿಗೆ ಹೋದಾಗ ಜಿಲ್ಲಾಧಿಕಾರಿ ಇರಲಿಲ್ಲ. ಕರೆ ಮಾಡಿದರೆ ಸ್ವೀಕರಿಸಲಿಲ್ಲ. ಹೊಳೆನರಸೀಪುರ



ಕ್ಷೇತ್ರದ ಎರಡೂವರೆ ಲಕ್ಷ ಜನರು ಕೂಲಿಕಾರನನ್ನಾಗಿ ಮತ ನೀಡಿ ನನ್ನನ್ನು ಗೆಲ್ಲಿಸಿದ್ದಾರೆ. ಅವರ ಸಮಸ್ಯೆಗಳಿಗೆ ಕಿವಿಯಾಗುವುದು ಜನಪ್ರತಿನಿಧಿಯಾಗಿ ನನ್ನ ಕರ್ತವ್ಯ. ನಾನು ಓದಿರುವುದು ಕಡಿಮೆ, ಜಿಲ್ಲಾಧಿಕಾರಿಗೆ ಇರುವಷ್ಟು ಅನುಭವವಿಲ್ಲ. ನನ್ನ ಮಾತು ಅವರಿಗೆ ನೋವು ತರಿಸಿದ್ದರೆ ಹೇಗೆ ಮಾತನಾಡಬೇಕೆಂದು ಹೇಳಿಕೊಡಲಿ ಮುಂದಿನ ದಿನಗಳಲ್ಲಿ ಹಾಗೆಯೇ ಮಾತನಾಡುತ್ತೇನೆಂದರು.

**"ಜನರ ಕಷ್ಟಸುಖಗಳಿಗೆ ಸ್ಪಂದಿಸಿದರೆ ಅವರು ಓದಿದ ಐಎಎಸ್‌ಗೆ ಬೆಲೆ ಬರುತ್ತದೆ. ಮಹಿಳೆಯರಿಗೆ ಗೌರವ ಕೊಡುವುದನ್ನು ಅವರಿಂದ ಕಲಿಯಬೇಕಿಲ್ಲ. ಜಿಲ್ಲೆಯಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ಸಾಕ್ಷಿ ಸಮೇತ ಹೇಳಬೇಕಾದ ಜಾಗದಲ್ಲಿ ಹೇಳುತ್ತೇನೆ. ಬೇಕಿದ್ದರೆ ಸರ್ಕಾರದ ಪ್ರಧಾನ ಕಾರ್ಯದರ್ಶಿಯನ್ನೇ ಕರೆಸಲಿ, ಅವರ ಎದುರೇ ಎಲ್ಲಾ ಬಹಿರಂಗ ಪಡಿಸುತ್ತೇನೆ.**
**-ಹೆಚ್.ಡಿ.ರೇವಣ್ಣ, ಮಾಜಿ ಸಚಿವ**

ಗ್ರಾಮ ಪಂಚಾಯಿತಿ ಮೀಸಲಾತಿ ಪಟ್ಟಿಯಲ್ಲಿ ರಾಜಕೀಯ ಮಾಡಲಾಗಿದೆ. ರಾಜಕಾರಣಿಯೊಬ್ಬ ಹೇಳಿದ ಹಾಗೆ ಪಟ್ಟಿ ತಯಾರಿಸಿದ್ದಾರೆ. ತಹಶೀಲ್ದಾರ್‌ಗೆ ಮೀಸಲಾತಿ ಪಟ್ಟಿ ಸಲ್ಲಿಸುವ ಅವಕಾಶ ಇಲ್ಲದಿದ್ದರೆ ಅವರಿಂದ ಪಡೆದಿದ್ದಾದರೂ ಏಕೆ. ಅವರು ತಪ್ಪು ಮಾಡಿದ್ದರೆ ಅಂತಹವರನ್ನು ಅಮಾನತು ಮಾಡಲಿ ಎಂದು ಸವಾಲೆಸೆದ ಅವರು, ನಮಗೆ ಯಾವುದೇ ತಹಶೀಲ್ದಾರ್ ಪಟ್ಟಿ ಕೊಟ್ಟಿಲ್ಲ. ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿಯಲ್ಲಿ ದಾಖಲೆಗಳನ್ನು ಪಡೆದಿದ್ದೇನೆ. ಅದರಲ್ಲಿ ಆಗಿರುವ ಲೋಪಗಳ ಕುರಿತು ಹೇಳಲು ಕರೆ ಮಾಡಿದರೆ ಸ್ವೀಕರಿಸಲಿಲ್ಲ. ನಮ್ಮ ಸಮಸ್ಯೆ ಯಾರಿಗೆ ಹೇಳುವುದೆಂದು ಪ್ರಶ್ನಿಸಿದರು.

ಗ್ರಾ.ಪಂ. ಮೀಸಲಾತಿ ಪಟ್ಟಿಯಲ್ಲಿ ಆಗಿರುವ ಲೋಪಗಳ ಕುರಿತು ಮುಂದಿನ ಸೋಮವಾರ ದೊಳಗೆ ಅರ್ಜಿ ಸಲ್ಲಿಸಲು ಪಕ್ಷದ ಮುಖಂಡರಿಗೆ ಹೇಳಿದ್ದೇನೆ. ಆ ಬಳಿಕ ಕಾನೂನು ಹೋರಾಟ ಮಾಡುತ್ತೇನೆ. ನ್ಯಾಯಾಲಯದ ಮುಂದೆ ಏನು ಹೇಳಬೇಕೋ ಅದನ್ನು ಹೇಳುತ್ತೇನೆಂದರು.

ಜಿಲ್ಲಾಧಿಕಾರಿ ಐಎಎಸ್ ಅಧಿಕಾರಿಯಾಗಿರಬಹುದು. ಆದರೆ, ನನ್ನನ್ನು ಜನರು ಆರು ಬಾರಿ ಶಾಸಕರನ್ನಾಗಿ ಆಯ್ಕೆ ಮಾಡಿದ್ದಾರೆ. ಜನರಿಗೆ ಅನ್ಯಾಯವಾದಾಗ ಅವರ ಪರವಾಗಿ ಮಾತನಾಡುವುದು ನನ್ನ ಕರ್ತವ್ಯವೆಂದು ಹೇಳಿದರು.

**ಪ್ರಶ್ನಿಸುವ ಹಕ್ಕು ನನಗಿದೆ**

ಕಳೆದ ಒಂದೂವರೆ ವರ್ಷಗಳಿಂದ ಜಿಲ್ಲಾಧಿಕಾರಿ ಕಚೇರಿಗೆ ಭೇಟಿ ನೀಡಿಲ್ಲವೆಂದು ಹೇಳಿದ ರೇವಣ್ಣ ಅವರು, ನನ್ನ 30 ವರ್ಷದ ರಾಜಕೀಯ ಜೀವನದಲ್ಲಿ ಅನೇಕ ಹಿರಿಯ ಅಧಿಕಾರಿಗಳನ್ನು ನೋಡಿದ್ದೇನೆ. ಜನರ ಪರವಾಗಿ ಪ್ರಶ್ನಿಸುವ ಹಕ್ಕು ನನಗಿದೆ. ನಾನು ಸಾಮಾನ್ಯ ಶಾಸಕ ಎಂದರು.

» ನಾಲ್ಕನೇ ಪುಟದಲ್ಲಿ

## ಜಿಲ್ಲೆಯ ಪಿಎಸ್‌ಐಗಳ ವರ್ಗಾವಣೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ವಿವಿಧ ಠಾಣೆಗಳ ಪಿಎಸ್‌ಐಗಳನ್ನು ವರ್ಗಾವಣೆ ಮಾಡಲಾಗಿದೆ. ಶಾಂತಿಗ್ರಾಮ ಠಾಣೆಯ ಅರುಣ್ ಅವರನ್ನು ಗಂಡಸಿ, ದುದ್ದ ಠಾಣೆಯ ಎಂ.ಟಿ. ಅಂತಿಮ ಅವರನ್ನು ಶಾಂತಿಗ್ರಾಮ, ಸೆನ್ ಠಾಣೆಯ ಜಿ.ಜಿತೇಂದ್ರಕುಮಾರ್-ದುದ್ದ, ಹಿರೀಸಾವೆ ಠಾಣೆಯ ರೂಪಾದೇವಿ ಬಿರಾದಾರ್-ಚನ್ನರಾಯಪಟ್ಟಣ ಗ್ರಾಮಾಂತರ ಠಾಣೆ, ಚ.ರಾ.ಪಟ್ಟಣ ಗ್ರಾಮಾಂತರ ಠಾಣೆಯ ಎಲ್.ಸಂತೋಷ್ ಅವರು ನುಗ್ಗೇಹಳ್ಳಿ, ಗೊರೂರು ಠಾಣೆಯಲ್ಲಿದ್ದ ಆರ್.ಧನರಾಜು-ಶ್ರವಣಬೆಳಗೊಳ ಠಾಣೆಗೆ ವರ್ಗಾಯಿಸಲಾಗಿದೆ.

ಕುಶಾಲನಗರ ಠಾಣೆಯಲ್ಲಿದ್ದ ಗಣೇಶ ಅವರಿಗೆ ಗೊರೂರು, ಶ್ರವಣಬೆಳಗೊಳ ಠಾಣೆಯ ಎನ್.ಜಿ.ನವೀನಕುಮಾರ್ ಅವರನ್ನು ಹಿರೀಸಾವೆ ಠಾಣೆಗೆ ವರ್ಗ ಮಾಡಲಾಗಿದೆ. ಪಿಎಸ್‌ಐಗಳಾದ ಟಿ.ಆರತಿ ಹಾಗು ಭರತಕುಮಾರ್ ರೆಡ್ಡಿ ಅವರಿಗೆ ಮುಂದಿನ ಆದೇಶದ ವರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಕಾರ್ಯ ನಿರ್ವಹಿಸುವಂತೆ ದಕ್ಷಿಣ ವಲಯ ಪೊಲೀಸ್ ಮಹಾನಿರೀಕ್ಷಕ ಡಾ.ಎಂ.ಬಿ. ಬೋರಲಿಂಗಯ್ಯ ಅವರು ಸೋಮವಾರ ಆದೇಶಿಸಿದ್ದಾರೆ.

## ಪೊಲೀಸ್ ಹೆಸರಿನಲ್ಲಿ ಮಹಿಳೆಗೆ ತೊಂದರೆ : ವ್ಯಕ್ತಿ ಬಂಧನ

• ಪ್ರಜೋದಯ ವರದಿ

**ಬೇಲೂರು:** ತಾನು ಸೈಬರ್ ಕ್ರೈಂ ಪೊಲೀಸ್ ಎಂದು ಸುಳ್ಳು ಹೇಳಿ ವಿಚಾರಣೆ ನೆಪದಲ್ಲಿ ಮಹಿಳೆಯೊಬ್ಬರಿಗೆ ಅಶ್ಲೀಲ ಸಂದೇಶ ಕಳುಹಿಸುತ್ತಿದ್ದ ವ್ಯಕ್ತಿಯನ್ನು ಪಟ್ಟಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೂಡಿಗೆರೆ ಮೂಲದ ಶರತ್ ಎಂಬಾತನನ್ನು ಬಂಧಿಸಲಾಗಿದೆ. ಸಣ್ಣಪುಟ್ಟ ಕೆಲಸ ಮಾಡಿಕೊಂಡು ಒಂದು ವರ್ಷದಿಂದ ಪಟ್ಟಣದಲ್ಲೇ ನೆಲೆಸಿದ್ದ ಈತ ಮಹಿಳೆಗೆ ಅಶ್ಲೀಲ ಫೋಟೋ, ಸಂದೇಶ ಕಳುಹಿಸುತ್ತಿದ್ದ. ಕಳೆದ ವರ್ಷ ನಡೆದಿದ್ದ ಗುರಪ್ಪಗೌಡ ಬೀದಿಯ ಗಿರೀಶ್ ಎಂಬಾತನ ಹತ್ಯೆ ಪ್ರಕರಣ ಸಂಬಂಧ ವಿಚಾರಣೆ ನಡೆಸಲು ಮೇಲಾಧಿಕಾರಿಗಳು ಸೂಚಿಸಿದ್ದಾರೆಂದು ಗಿರೀಶ್ ಅವರ ಮನೆಗೆ ಬಂದಿದ್ದ ಶರತ್ ಕುಟುಂಬದ ಎಲ್ಲರ ಮೊಬೈಲ್ ನಂಬರ್ ಪಡೆದಿದ್ದ. ನಂತರ ಮಹಿಳೆಯೊಬ್ಬರಿಗೆ ಪದೇ ಪದೇ ಕರೆ ಮಾಡುವುದು, ಸಂದೇಶ ಕಳುಹಿಸುವುದನ್ನು ಮಾಡುತ್ತಿದ್ದ ಎಂದು ತಿಳಿದುಬಂದಿದೆ.

ಆತನ ವರ್ತನೆ ಬಗ್ಗೆ ಅನುಮಾನ ವ್ಯಕ್ತಪಡಿಸಿದ ನೊಂದ ಮಹಿಳೆ ಪಟ್ಟಣ ಠಾಣೆ ಪೊಲೀಸರನ್ನು ವಿಚಾರಿಸಿದಾಗ ಶರತ್ ನಕಲಿ ಪೊಲೀಸ್ ಎನ್ನುವುದು ಗೊತ್ತಾಗಿದೆ. ಪ್ರಕರಣದ ಗಂಭೀರತೆ ಅರಿತ ಪೊಲೀಸರು ಆತನನ್ನು ಪಟ್ಟಣದ ಬಸ್ ನಿಲ್ದಾಣ ಸಮೀಪ ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.




# ಜಿಲ್ಲೆಯ ಸಮಸ್ಯೆ ಸಂಸತ್ ಅಧಿವೇಶನದಲ್ಲಿ ಪ್ರಸ್ತಾಪ

■ ಅನುಮೋದನೆಗಾಗಿ ಸಚಿವರ ಭೇಟಿ, ಮನವಿ ಸಲ್ಲಿಕೆ: ಶ್ರೇಯಸ್ ಪಟೇಲ್

• ಪ್ರಜೋದಯ ವರದಿ

**ಹಾಸನ:** ಸಂಸತ್ ಮುಂಗಾರು ಅಧಿವೇಶನದಲ್ಲಿ ಜಿಲ್ಲೆಗೆ ಸಂಬಂಧಿಸಿದ 10 ಪ್ರಮುಖ ಅಂಶಗಳ ಬಗ್ಗೆ ಪ್ರಶ್ನೆಗಳ ಮೂಲಕ ಕೇಂದ್ರದ ಅಧಿಕೃತ ದಾಖಲಾತಿಗೆ ತರಲಾಗಿದೆ. ಆದರೆ, ಸದನ ಸರಿಯಾಗಿ ನಡೆಯದಿದ್ದರಿಂದ ಲಿಖಿತ ಉತ್ತರ ದೊರೆತಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ತಿಳಿಸಿದರು.

ಸೋಮವಾರ ಸಂಸದರ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿವೇಶನದಲ್ಲಿ ಪ್ರಶ್ನೆ ಕೇಳಿರುವುದಲ್ಲದೆ ರಸ್ತೆ, ರೈಲ್ವೆ, ಶಿಕ್ಷಣ, ಆರೋಗ್ಯ, ಪರಿಸರ, ಪ್ರವಾಸೋದ್ಯಮ ಹಾಗು ಮೂಲಸೌಕರ್ಯ ಸೇರಿ ಹಲವು ಬೇಡಿಕೆ ಕುರಿತು ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೇನೆಂದು ಹೇಳಿದರು.

» ನಾಲ್ಕನೇ ಪುಟದಲ್ಲಿ



**ಕಾಫಿ ಬೆಳೆಗಾರರಿಗೆ ನೆರವಾಗಲು ಹೋರಾಟ**
ಜಿಲ್ಲೆಯ ಸಕಲೇಶಪುರ, ಬೇಲೂರು ಸೇರಿ ಕಾಫಿ ಬೆಳೆಯುವ ಪ್ರದೇಶಗಳ ಬೆಳೆಗಾರರು ಬ್ಯಾಂಕ್ ಸಾಲ ಮತ್ತು ಸರ್ಫೇಸಿ ಕಾಯ್ದೆ ಅಡಿ ನಡೆಯುವ ವಸೂಲಾತಿ ಕ್ರಮಗಳ ಬಗ್ಗೆ ಲೋಕಸಭೆಯಲ್ಲಿ ಪ್ರಸ್ತಾಪ ಮಾಡಿದೆ. ಆದರೆ, ಸರ್ಕಾರ ಪೂರಕವಾದ ಉತ್ತರ ನೀಡದೆ, ವಿಚಾರ ನ್ಯಾಯಾಲಯದಲ್ಲಿ ಇದೆ ಎಂದು ಸರ್ಕಾರ ತಿಳಿಸಿದೆ. ಕಾಫಿ ಬೆಳೆಗಾರರಿಗೆ ನೆರವಾಗುವ ನಿಟ್ಟಿನಲ್ಲಿ ಹೋರಾಟ ನಡೆಸಲಾಗುವುದು ಎಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

## ಮ್ಯಾಪಿಂಗ್ ಆಗದ 79 ಸಾವಿರ ಮಂದಿಗೆ ನೋಟೀಸ್: ಜಿಲ್ಲಾಧಿಕಾರಿ ಲತಾಕುಮಾರಿ

# ಜಿಲ್ಲೆಯ 1.67 ಲಕ್ಷ ಮತದಾರರನ್ನು ಕೈಬಿಡಲು ನಿರ್ಧಾರ

• ಪ್ರಜೋದಯ ವರದಿ

**ಹಾಸನ:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಜಿಲ್ಲೆಯ 1,67,285 ಮತದಾರರನ್ನು ಮತದಾರರ ಪಟ್ಟಿಯಿಂದ ಕೈಬಿಡಲು ತೀರ್ಮಾನಿಸ ಲಾಗಿದ್ದು, ಮ್ಯಾಪಿಂಗ್ ಆಗದ 79,778 ಮತದಾರರಿಗೆ ನೋಟೀಸ್ ನೀಡಲಾಗುವುದೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ತಿಳಿಸಿದರು.

ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಸ್‌ಐಆರ್ ಪ್ರಕ್ರಿಯ ಕರಡು ಮತದಾರರ ಪಟ್ಟಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 13,75,517 ಮತದಾರರಿದ್ದಾರೆ. ಈ ಪೈಕಿ 680,925 ಪುರುಷರು, 6,94, 559 ಮಹಿಳೆಯರು, 33 ತೃತೀಯ ಲಿಂಗಿಗಳು ಸೇರಿದ್ದಾರೆ. ಮತದಾರರ ಪಟ್ಟಿ ಪರಿಕ್ಷರಣೆಗೂ ಮೊದಲು ಜಿಲ್ಲೆ ಯಲ್ಲಿ 15,42,802 ಮತದಾರರಿದ್ದರು. ಪರಿಷ್ಕರಣೆ ಬಳಿಕ 13,75,517 ಮಂದಿ ಉಳಿದಿದ್ದಾರೆಂದು ತಿಳಿಸಿದರು.

ಮತದಾರರ ಪಟ್ಟಿಯಿಂದ ಕೈಬಿಡಲು ನಿರ್ಧರಿಸಿರುವ 1,67,285 ಮತದಾರರ ಪೈಕಿ 52,022 ಮಂದಿ ಮರಣ ಹೊಂದಿದ್ದಾರೆ. 73,964 ಮಂದಿ ಶಾಶ್ವತವಾಗಿ ವಲಸೆ ಹೋಗಿದ್ದಾರೆ. 13,616 ಪುನರಾವರ್ತನೆ, 24,632 ಗೈರು ಮತ್ತು 3,051 ಇತರೆ ಕಾರಣಗಳಿಂದ ತಮ್ಮ ಹಕ್ಕನ್ನು ಕಳೆದುಕೊಳ್ಳಲಿದ್ದಾರೆ. ಪಟ್ಟಿಯಿಂದ ಹೊರಗುಳಿದವರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದರು.

2002ರ ಮತದಾರರ ಪಟ್ಟಿಯಿಂದ 6,43,090 ಮತದಾರರು ಸ್ವಯಂ ಮ್ಯಾಪಿಂಗ್, 7,08,786 ಮತದಾರರು ಸಂತತಿ ಮ್ಯಾಪಿಂಗ್ ಹಾಗು 23,641 ಮತದಾರರು ಯಾವುದೇ ಮ್ಯಾಪಿಂಗ್ ಆಗಿಲ್ಲವೆಂದು ವಿಂಗಡಿಸಲಾಗಿದೆ. ಮತದಾರರ ಪಟ್ಟಿಯಲ್ಲಿರುವ ಪೈಕಿ ವ್ಯತ್ಯಾಸಗಳಿರುವ 56,137 ಮತದಾರರನ್ನು ಗುರುತಿಸಲಾಗಿದೆ. ಈ ಮತದಾರರ ವಿಚಾರಣೆ ನಡೆಸಲು ನೋಟೀಸ್ ನೀಡಿ, ಸ್ಥಳ, ಸಮಯ ತಿಳಿಸಲಾಗುವುದು. ಚುನಾವಣಾ ಆಯೋಗ ನಿಗದಿ ಪಡಿಸುವ 12 ವಿವಿಧ ದಾಖಲೆಗಳ ಪೈಕಿ ಯಾವುದಾದರೂ ಎರಡು ದಾಖಲೆಗಳನ್ನು ಸಲ್ಲಿಸಬೇಕಿದೆ ಎಂದು ಹೇಳಿದರು.



**"ಮ್ಯಾಪಿಂಗ್ ಆಗದ ಒಟ್ಟು 79,778 ಮತದಾರರು ನೋಟೀಸ್ ನೀಡಿದ 7 ದಿನಗಳೊಳಗೆ ಸಹಾಯಕ ಮತದಾರರ ನೋಂದಣಾಧಿಕಾರಿಗಳು ನಿಗದಿಪಡಿಸಿದ ದಿನಾಂಕ ಮತ್ತು ಸ್ಥಳಕ್ಕೆ ಖುದ್ದು ವಿಚಾರಣೆಗೆ ಹಾಜರಾಗಿ, ಅಗತ್ಯ ದಾಖಲೆಗಳನ್ನು ಒದಗಿಸಿ, ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಉಳಿಯುವಂತೆ ನೋಡಿಕೊಳ್ಳಬೇಕು.**
**-ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ**

**ಎಸ್‌ಐಆರ್ ಕರಡು ಮತದಾರರ ಪಟ್ಟಿ**

| ಕ್ಷೇತ್ರ | ಪುರುಷ | ಮಹಿಳೆ | ಒಟ್ಟು |
|---|---|---|---|
| ಶ್ರವಣಬೆಳಗೊಳ | 94,002 | 98,074 | 1,92,079 |
| ಅರಸೀಕೆರೆ | 1,00,744 | 1,03,969 | 2,04,717 |
| ಬೇಲೂರು | 92,454 | 93,240 | 1,85,694 |
| ಹಾಸನ | 91,703 | 97,196 | 1,88,911 |
| ಹೊಳೆನರಸೀಪುರ | 1,00,923 | 1,02,185 | 2,03,117 |
| ಅರಕಲಗೂಡು | 1,08,323 | 1,05,477 | 2,13,803 |
| ಸಕಲೇಶಪುರ | 92,776 | 94,418 | 1,87,196 |
| ಒಟ್ಟು | 6,80,925 | 6,94,559 | 13,75,517 |

**ಆಕ್ಷೇಪಣೆ ಸಲ್ಲಿಕೆಗೆ ಅವಕಾಶ**

ಚುನಾವಣಾ ಆಯೋಗದ ನಿರ್ದೇಶನದಂತೆ ಆ.24 ರಿಂದ ಸೆ.23ರ ವರೆಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ. ಈ ಅವಧಿಯಲ್ಲಿ ಮತದಾರರು ಹೆಸರು ಸೇರ್ಪಡೆ, ತಿದ್ದುಪಡಿ, ವರ್ಗಾವಣೆ ಮಾಡಬೇಕಿದ್ದಲ್ಲಿ ನಮೂನೆ-6, 7, 8ರಲ್ಲಿ ಆಯಾ ಮತದಾರರ ನೋಂದಣಾಧಿಕಾರಿಗಳಿಗೆ ಅಥವಾ ಆಯೋಗದ ವೆಬ್‌ಸೈಟ್ ಮೂಲಕ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

**ಮತಗಟ್ಟೆ ಸಂಖ್ಯೆ ಹೆಚ್ಚಳ**

ಜಿಲ್ಲೆಯಲ್ಲಿ 60 ಮತಗಟ್ಟೆ ಹೆಚ್ಚಾಗಲಿವೆ. 1200ಕ್ಕೂ ಹೆಚ್ಚು ಮತದಾರರಿರುವ ಕಡೆ ಹೊಸ ಮತಗಟ್ಟೆ ಸ್ಥಾಪಿಸಲು ಅನುಮೋದನೆ ಪಡೆಯಲಾಗಿದೆ. ಅದರಂತೆ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಒಟ್ಟು ಮತಗಟ್ಟೆಗಳ ಸಂಖ್ಯೆ 2,028 ಕ್ಕೆ ಹೆಚ್ಚಳ ಆಗಲಿವೆ ಎಂದು ತಿಳಿಸಿದರು.

## ಉಪನ್ಯಾಸಕ ಆತ್ಮಹತ್ಯೆಗೆ ಶರಣು

• ಪ್ರಜೋದಯ ವರದಿ



**ಅರಕಲಗೂಡು:** ತಾಲ್ಲೂಕಿನ ದೊಡ್ಡಮಗ್ಗೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಇಂಗ್ಲೀಷ್ ಉಪನ್ಯಾಸಕ ಸೋಮವಾರ ನೇಣಿಗೆ ಶರಣಾಗಿರುವ ಘಟನೆ ನಡೆದಿದೆ.

ರಾಮನಾಥಪುರ ಹೋಬಳಿ ಶಿರದನಹಳ್ಳಿ ಗ್ರಾಮದ ಬಾಬುವರ್ಧನ್ (47) ಮೃತರು. ಸೋಮವಾರ ಮಧ್ಯಾಹ್ನ ಮನೆಯಲ್ಲಿ ನೇಣಿಗೆ ಶರಣಾಗಿದ್ದಾರೆ. ಮೃತರಿಗೆ ಪತ್ನಿ, ಇಬ್ಬರು ಮಕ್ಕಳಿದ್ದಾರೆ. ಕೊಣನೂರು ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಯಿತು.

ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಉಪನ್ಯಾಸಕರಾಗಿದ್ದ ಬಾಬುವರ್ಧನ್ ಅವರು ಅನೇಕ ಬಡ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ನೆರವಾಗಿದ್ದಾರೆ. ಇಂಗ್ಲೀಷ್ ವಿಷಯ ಬೋಧನೆಯಲ್ಲಿ ಪರಿಣತರಾಗಿದ್ದರು. ಆದರೆ ಕಳೆದ ಕೆಲ ದಿನಗಳ ಹಿಂದೆ ನಡೆದ ಅಹಿತಕರ ಘಟನೆಯಿಂದ ಅವರು ಮಾನಸಿಕವಾಗಿ ನೊಂದಿದ್ದರು ಎನ್ನಲಾಗಿದೆ. ಪ್ರಕರಣ ಕುರಿತು ಕೊಣನೂರು ಪೊಲೀಸರು ತನಿಖೆ ಕೈಗೆತ್ತಿಕೊಂಡಿದ್ದಾರೆ.

# ಜ್ಞಾನ ಮತ್ತು ಅಹಂಕಾರ



ಜ್ಞಾನ ಮತ್ತು ಅಹಂಕಾರ ಎರಡಕ್ಕೂ ನೇರ ಸಂಬಂಧ ಇರುತ್ತದೆ. ಜ್ಞಾನ ಕಡಿಮೆಯಾದಷ್ಟೂ ಅಹಂಕಾರ ಹೆಚ್ಚುತ್ತದೆ - ಆಲ್ಬರ್ಟ್ ಐನ್ ಸ್ಟೈನ್. ಇರಬಹುದೇ? ಒಮ್ಮೆ ನಮ್ಮ ಸುತ್ತಮುತ್ತಲಿನ ಜನರ ಅವಲೋಕನ ಮತ್ತು ನಮ್ಮೊಳಗೆ ಆತ್ಮವಿಮರ್ಶೆ ಮಾಡಿಕೊಳ್ಳೋಣ.

ಸಾಮಾಜಿಕ ಜಾಲತಾಣಗಳ ಬೆಳವಣಿಗೆಯೊಂದಿಗೆ ಬಹುತೇಕ ಆಸಕ್ತಿಯ ಎಲ್ಲಾ ಜನರಿಗೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ವೇದಿಕೆ ಮತ್ತು ಸ್ವಾತಂತ್ರ್ಯ ದೊರೆತಿದೆ. ಈ ಹಿನ್ನೆಲೆಯಲ್ಲಿ ಸಾಮಾನ್ಯವಾಗಿ ಮನುಷ್ಯನಿಗೆ ಇರಬಹುದಾದ ಅಥವಾ ಬರಬಹುದಾದ ಅಹಂಕಾರ ಅಥವಾ ಅದಕ್ಕೂ ಮಿಗಿಲಾಗಿ ದುರಹಂಕಾರ ಯಾವ ಕಾರಣಗಳಿಗಾಗಿ ಅವನೊಳಗೆ ಪ್ರವೇಶಿಸುತ್ತದೆ ಎಂಬುದನ್ನು ಪರಿಶೀಲಿಸೋಣ. ಹಣದ ಅಹಂ, ಅಧಿಕಾರದ ಅಹಂ, ಆಸ್ತಿಯ ಅಹಂ, ಸೌಂದರ್ಯದ ಅಹಂ, ಅಕ್ಷರದ ಅಹಂ, ಜ್ಞಾನದ ಅಹಂ, ಪ್ರಶಸ್ತಿಯ ಅಹಂ, ಜನಪ್ರಿಯತೆಯ ಅಹಂ ಹೀಗೆ ನಾನಾ ಕಾರಣಗಳಿಂದಾಗಿ ಇದು ಹುಟ್ಟುತ್ತದೆ.

ಇಲ್ಲಿ ಅಹಂಕಾರ, ದುರಹಂಕಾರ, ಹೆಮ್ಮೆ ಇವುಗಳಿಗೆ ಇರುವ ವ್ಯತ್ಯಾಸ ಕೂಡ ಗಮನದಲ್ಲಿಟ್ಟುಕೊಂಡು ಚರ್ಚಿಸಬೇಕು. ಏಕೆಂದರೆ ಇತರರ ಬಳಿ ಇಲ್ಲದಿರುವುದು ನನ್ನ ಬಳಿ ಇದೆ ಎನ್ನುವ ತನ್ನ ಸ್ವ ಸಾಮರ್ಥ್ಯದ ಹೆಚ್ಚುಗಾರಿಕೆಯ ಆಂತರಿಕ ಹೆಮ್ಮೆ ಮತ್ತು ಅದರ ಭಾಗವಾಗಿ ಬಹಿರಂಗವಾಗಿ ವಿನಯದ ಪ್ರದರ್ಶನ, ತನ್ನ ಬಳಿ ಇರುವುದು ಅವರ ಬಳಿ ಇಲ್ಲ ಎನ್ನುವ ಕಾರಣಕ್ಕಾಗಿ ಇತರರನ್ನು ಕೀಳಾಗಿ ಕಾಣುವುದು ಅಥವಾ ಅವರಿಗೆ ಮುಜುಗರವಾಗುವಂತೆ ವರ್ತಿಸುವುದು ಅಹಂಕಾರ, ಇದೇ ಕಾರಣಕ್ಕಾಗಿ ಬೇರೆಯವರನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸಿಸುವುದು ದುರಹಂಕಾರ ಮತ್ತು ಅಪರಾಧ.

ಬಹುಶಃ ಐನ್ ಸ್ಟೈನ್ ಅವರ ಮಾತಿನ ಅರ್ಥ ಅಜ್ಞಾನಿಗಳು ಹೆಚ್ಚು ಅಹಂಕಾರ ಹೊಂದಿರುತ್ತಾರೆ ಕಾರಣ ಅವರಿಗೆ ಸಮಗ್ರ ಚಿಂತನೆಯಾಗಲಿ, ವಿಶಾಲ ಮನೋಭಾವವಾಗಲಿ, ಒಳ್ಳೆಯತನವಾಗಲಿ ಇರುವುದಿಲ್ಲ. ಸಂಕುಚಿತ ದೃಷ್ಟಿಕೋನ ಮತ್ತು ನಾನು ನನ್ನದು ಎಂಬ ಸ್ವಾರ್ಥ ತುಸು ಹೆಚ್ಚಾಗಿಯೇ ಇರುತ್ತದೆ. ಆ ಅಜ್ಞಾನ ಅಹಂಕಾರವಾಗಿ ನಮಗರಿವಿಲ್ಲದೇ ಪರಿವರ್ತನೆ ಹೊಂದಿ ನಮ್ಮೊಳಗೆ ಅಡಕವಾಗಿ ನಮ್ಮ ನಡವಳಿಕೆಯಾಗಿ ಮಾರ್ಪಡುತ್ತದೆ ಎಂಬುದಾಗಿರಬಹುದು. ಆಳದಲ್ಲಿ ಅಹಂಕಾರದ ಒಳ ಅರ್ಥ ಮತ್ತೇನೋ ಇರಬಹುದು ಅಥವಾ ಆ ರೀತಿಯಲ್ಲಿ ವ್ಯಾಖ್ಯಾನಿಸಬಹುದು. ಆದರೆ ವ್ಯಾವಹಾರಿಕವಾಗಿ ಐನ್ ಸ್ಟೈನ್ ಹೇಳಿದ ನಡವಳಿಕೆ ನಮ್ಮ ಸುತ್ತಮುತ್ತಲಿನ ಜನರ ಒಡನಾಟದಿಂದ ನಮಗೆ ಅರಿವಾಗುತ್ತದೆ.

ಉದಾಹರಣೆಗೆ ನಮ್ಮ ನಿಮ್ಮ ನಡುವೆ ಸಾಮಾನ್ಯ ಪರಿಸ್ಥಿತಿಯಲ್ಲಿ ಆತ್ಮೀಯವಾಗಿ ಸ್ನೇಹದಿಂದ ಇರುವ ವ್ಯಕ್ತಿಗಳು ಅಥವಾ ಸಂಬಂಧಿಕರು ಯಾವುದೋ ಕಾರಣದಿಂದಾಗಿ ಅವರ ಒಟ್ಟು ಪರಿಸ್ಥಿತಿ ನಮಗಿಂತ ಉತ್ತಮವಾದಾಗ ಅವರ ವರ್ತನೆಯ ಬದಲಾವಣೆಗಳನ್ನು ಗಮನಿಸಬಹುದು. ಅದರಲ್ಲೂ ಬಹುಮುಖ್ಯವಾಗಿ ದಿಢೀರನೆ ಜಮೀನಿನ ಕಾರಣದಿಂದ ಅಥವಾ ಅಧಿಕಾರದ ಕಾರಣದಿಂದ ಅಥವಾ ಮಕ್ಕಳ ಅನಿರೀಕ್ಷಿತ ವಿದೇಶದ ಉದ್ಯೋಗ ಕಾರಣದಿಂದ ಅಥವಾ ಶ್ರೀಮಂತ ಅಳಿಯ ಅಥವಾ ಸೊಸೆಯ ಕಾರಣದಿಂದ ಅಥವಾ ವ್ಯವಹಾರದ ಲಾಭ ಅಥವಾ ಭ್ರಷ್ಟ ಹಣದಿಂದ ಹೀಗೆ ಅವರು ನಮಗಿಂತ ಹೆಚ್ಚು ಶ್ರೀಮಂತರು ಅಥವಾ ಜನಪ್ರಿಯ ವ್ಯಕ್ತಿಗಳಾದರೆ ಕ್ರಮೇಣ ಅವರು ಅವರಿಗಿಂತ ಕೆಳ ಹಂತದಲ್ಲಿರುವವರ ಬಗ್ಗೆ ನಿರ್ಲಕ್ಷ್ಯ ಅಥವಾ ಕೀಳು ಮನೋಭಾವ ಪ್ರದರ್ಶಿಸುತ್ತಾರೆ. ಕೆಲವು ದುರಹಂಕಾರಿಗಳು ನೇರವಾಗಿ, ಮತ್ತೆ ಕೆಲವು ಅಹಂಕಾರಿಗಳು ಪರೋಕ್ಷವಾಗಿ ವ್ಯಕ್ತಪಡಿಸುತ್ತಾರೆ. ಇದರ ಹಿನ್ನೆಲೆಯಲ್ಲಿ ಐನ್ ಸ್ಟೈನ್ ಮಾತುಗಳು ಹೆಚ್ಚು ಅರ್ಥವನ್ನು ಹೊರಹೊಮ್ಮಿಸುತ್ತದೆ.

ವಿದ್ಯೆಗೆ ವಿನಯವೇ ಭೂಷಣ ಎಂಬ ಮಾತೊಂದಿದೆ. ಜ್ಞಾನವಂತನ ಮನಸ್ಥಿತಿ ಹೆಚ್ಚು ಸಮತೋಲನದಿಂದ ಕೂಡಿರುತ್ತದೆ. ಪ್ರಬುದ್ಧತೆಯ ಮಟ್ಟ ಉತ್ತಮ ಗುಣಮಟ್ಟ ಹೊಂದಿರುತ್ತದೆ. ಆಗ ವಿಷಯ ಯಾವುದೇ ಇರಲಿ ಸ್ಥಿತಪ್ರಜ್ಞತೆ ಕಾಪಾಡಿಕೊಳ್ಳಬಹುದು. ಇದನ್ನು ಸರಿಯಾಗಿ ಅರ್ಥಮಾಡಿಕೊಂಡು ನಮ್ಮ ಮನೋಭಾವ ಮತ್ತು ನಡವಳಿಕೆಯಲ್ಲಿ ಒಂದಷ್ಟು ಬದಲಾವಣೆ ಮಾಡಿಕೊಂಡರೆ ಅಹಂಕಾರ ಮತ್ತು ದುರಹಂಕಾರ ಕಡಿಮೆಯಾಗುವ ಎಲ್ಲಾ ಸಾಧ್ಯತೆ ಇದೆ. ಆತ್ಮವಿಮರ್ಶೆ ಇದಕ್ಕಾಗಿ ಇರುವ ಅತ್ಯುತ್ತಮ ಮಾರ್ಗ.

ಮನುಷ್ಯ ಸಾವಿರಾರು ವರ್ಷಗಳಷ್ಟು ಬದುಕುವುದಿಲ್ಲ. ಸಾಮಾನ್ಯವಾಗಿ 60 ರಿಂದ 80 ಎಂದು ಒಂದು ಅಂದಾಜು. ಈ ಕಾಲದಷ್ಟು ಜೀವನದಲ್ಲಿ ಇತರರೊಂದಿಗೆ ನಾವು ಕೂಡ ಒಂದಷ್ಟು ನೆಮ್ಮದಿ - ಸಂತೋಷದಿಂದ ಜೀವನ ನಡೆಸಬೇಕೆಂದರೆ ಇಡೀ ಸಮಾಜದ ವಾತಾವರಣ ಮುಖ್ಯವಾಗಿ ನಮ್ಮ ಮತ್ತು ನಮ್ಮ ಸಹವರ್ತಿಗಳ ನಡವಳಿಕೆ ಉತ್ತಮವಾಗಿರಬೇಕು ಅಂದರೆ ಅಹಂಕಾರ ಅಥವಾ ದುರಹಂಕಾರಗಳ ಹೆಚ್ಚು ಪ್ರದರ್ಶನಕ್ಕೆ ಅವಕಾಶ ಇರಬಾರದು.

ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡ ಎಂದು ವಚನ ಸಾಹಿತ್ಯದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ನಾವೆಲ್ಲರೂ ಇನ್ನು ಮುಂದೆ ನಮ್ಮ ಸಾಮರ್ಥ್ಯ, ನಮ್ಮ ಅದೃಷ್ಟ, ನಮ್ಮ ಉತ್ತಮ ಜೀವನಮಟ್ಟ, ನಮ್ಮ ಸುಖ ಸಂತೋಷಕ್ಕಾಗಿ ಹೆಮ್ಮೆ ಪಡೋಣ. ಆದರೆ ಅಹಂಕಾರ ಅಥವಾ ದುರಹಂಕಾರ ಪಡುವುದು ಬೇಡ. ನಮ್ಮಲ್ಲಿ ಇನ್ನೂ ದುರಹಂಕಾರ ಇದೆ ಎಂದಾದರೆ ನಾವು ಇನ್ನೂ ಅಜ್ಞಾನಿಗಳು ಎಂದು ನಮ್ಮನ್ನು ನಾವೇ ನಿರ್ಧರಿಸಿ ಮತ್ತೆ ನಾವು ಅಹಂಕಾರ ತ್ಯಜಿಸಿ ಜ್ಞಾನವಂತರಾಗಲು ಪ್ರಯತ್ನಿಸೋಣ. ಇದೊಂದು ನಿರಂತರ ಪ್ರಕ್ರಿಯೆ. ಇದು ಸ್ವಲ್ಪಮಟ್ಟಿಗೆ ಸಾಧ್ಯವಾದರೆ ಪ್ರಬುದ್ಧ ಮನಸ್ಸುಗಳ ಪ್ರಬುದ್ಧ ಸಮಾಜ ನಿರ್ಮಾಣದೆಡೆಗೆ ನಮ್ಮ ಹೆಜ್ಜೆಗಳು ಸಾಗುತ್ತಿವೆ ಎಂದು ಭಾವಿಸಬಹುದು. ಹಾಗಾಗಲಿ ಎಂದು ನಿರೀಕ್ಷಿಸುತ್ತಾ....

**- ವಿವೇಕಾನಂದ. ಎಚ್. ಕೆ.,** ಬೆಂಗಳೂರು

> ಹಳೆಯ ಹ್ಯಾಂಡ್‌ಬ್ಯಾಗ್‌ಗಳು, ವಾಚ್‌ಗಳು ಮತ್ತು ಸಾಂಪ್ರದಾಯಿಕ ಆಕ್ಸೆಸರೀಸ್‌ಗಳೂ ಮತ್ತೆ ಟ್ರೆಂಡ್‌ಗೆ ಬರುತ್ತಿವೆ. ಒಟ್ಟಿನಲ್ಲಿ ಹೇಳುವುದಾದರೆ, ಈಗ ಅಜ್ಜಿಯ ವಾರ್ಡ್‌ರೋಬ್ ನಮ್ಮದಕ್ಕಿಂತ ಹೆಚ್ಚು ಫ್ಯಾಷನೇ ಬಲ್ ಆಗಿರಬಹುದು! ಒಂದು ದಿನ ಸ್ಕಿನ್ನಿ ಜೀನ್ಸ್‌ಗಳದ್ದೇ ಹವಾ; ಮರುದಿನ ಅವು ಹಾಕಿಕೊಂಡರೆ ಫ್ಯಾಷನ್ ಲೋಕಕ್ಕೇ ಅಪಮಾನ ಮಾಡಿದಂತೆ!

# ಹಳೆ ಫ್ಯಾಷನ್ ಅಪ್ಪಿಕೊಂಡ ಹೊಸ ಜೆನ್

## ಐದು ದಶಕದ ನಂತರ ಯುವ ಜನರ ಮನ ಗೆದ್ದ ಅಗಲ ಬಾಟಂನ ಜೀನ್ಸ್





1970-80ರ ದಶಕದಲ್ಲಿ ವೈಡ್ ಲೆಗ್ ಪ್ಯಾಂಟ್ ಬಹಳ ಜನಪ್ರಿಯವಾಗಿತ್ತು; ಅಂದಿನ ಸಿನಿಮಾ ನಟನಟಿಯರು ಅಂತಹ ಬಟ್ಟೆ ಧರಿಸಿ ಕುಣಿದಾಡುತ್ತಿದ್ದರು! ಅಂದಿನ ಯುವ ಜನತೆಗೆ, ವೈಡ್ ಬೆಲ್ ಬಾಟಂ ಪ್ಯಾಂಟ್ ಅಂದರೆ, ಹುಚ್ಚು; ಪಾದದ ಬಳಿ, ಪ್ಯಾಂಟಿನ ಅಗಲ ಹೆಚ್ಚಾದಷ್ಟೂ, ಹುಚ್ಚು ಜಾಸ್ತಿ! ಈಗ ಮತ್ತೆ ಅದೇ ರೀತಿಯ ಫ್ಯಾಷನ್ ಮರುಕಳಿಸಿದೆ. ಇದನ್ನು ವೈಡ್ ಲೆಗ್ ಜೀನ್ಸ್ ಎನ್ನುವರು! ಇದಕ್ಕೇ ಅಲ್ಲವೇ, ಭೂಮಿಯು ದುಂಡಾಗಿದೆ ಎಂದು ಹೇಳುವುದು.

ಫ್ಯಾಷನ್‌ಗೆ ಒಂದು ವಿಚಿತ್ರ ಗುಣವಿದೆ. ಮೊದಲು ಹಳೆಯ ಫ್ಯಾಷನ್ ಎಂದುಕೊಂಡಿದ್ದೇ ಒಂದು ದಿನ ನಮ್ಮ ವಾರ್ಡ್ ರೋಬ್‌ನ ಅತ್ಯಂತ ಟ್ರೆಂಡಿ ವಸ್ತುವಾಗಿ ಬಿಡುತ್ತದೆ. ಅದಕ್ಕೇ ಅಲ್ಲವೇ ಓಲ್ಡ್ ಇಸ್ ಗೋಲ್ಡ್ ಅಂತ ಹೇಳೋದು! ಒಮ್ಮೆ ಹಳೆಯದು ಎಂದು ಬದಿಗಿಟ್ಟಿದ್ದ ವಸ್ತುಗಳೇ ಮತ್ತೆ ಹೊಸ ಟ್ರೆಂಡ್ ಆಗಿ ಮರಳುತ್ತಿವೆ. ಅಜ್ಜಿಯ ಹಳೆಯ ಸೀರೆಗಳು ಈಗ ವಿಂಟೇಜ್ ಅಥವಾ ಆಂಟಿಕ್ ಫ್ಯಾಷನ್ ಎಂದು ಹೆಮ್ಮೆಯಿಂದ ಧರಿಸಲಾಗುತ್ತವೆ. ಅವರ ಹಳೆಯ ಆಭರಣಗಳು ಮತ್ತೆ ಹೊರಗೆ ಬಂದು ಟೈಮ್‌ಲೆಸ್ ಜ್ಯುವೆಲ್ಲರಿ ಆಗುತ್ತವೆ.

ಹಳೆಯ ಹ್ಯಾಂಡ್‌ಬ್ಯಾಗ್‌ಗಳು, ವಾಚ್‌ಗಳು ಮತ್ತು ಸಾಂಪ್ರದಾಯಿಕ ಆಕ್ಸೆಸರೀಸ್‌ಗಳೂ ಮತ್ತೆ ಟ್ರೆಂಡ್‌ಗೆ ಬರುತ್ತಿವೆ. ಒಟ್ಟಿನಲ್ಲಿ ಹೇಳುವುದಾದರೆ, ಈಗ ಅಜ್ಜಿಯ ವಾರ್ಡ್‌ರೋಬ್ ನಮ್ಮದಕ್ಕಿಂತ ಹೆಚ್ಚು ಫ್ಯಾಷನೇ ಬಲ್ ಆಗಿರಬಹುದು! ಒಂದು ದಿನ ಸ್ಕಿನ್ನಿ ಜೀನ್ಸ್‌ಗಳದ್ದೇ ಹವಾ; ಮರುದಿನ ಅವು ಹಾಕಿಕೊಂಡರೆ ಫ್ಯಾಷನ್ ಲೋಕಕ್ಕೇ ಅಪಮಾನ ಮಾಡಿದಂತೆ!

ಈಗ ಹಾಗೇ ಆಗಿದೆ: ನಮ್ಮ ಜೀವನಕ್ಕೆ ವೈಡ್-ಲೆಗ್ಡ್ ಜೀನ್ಸ್ ಎಂಟ್ರಿ ಕೊಟ್ಟಿವೆ. ವಾರ್ಡ್ ರೋಬ್, ಇನ್ ಸ್ಟಾಗ್ರಾಂ ಫೀಡ್ ಎಲ್ಲೆಲ್ಲೂ ಇದರದ್ದೇ ಕ್ರೇಜ್. ಕಾಲೇಜಿನಿಂದ ಹಿಡಿದು ಕಾಫಿ ಶಾಪ್‌ವರೆಗೆ ಹುಡುಗಿಯರ ಫೇವರಿಟ್ ಡ್ರೆಸ್ ಇದು. ಆರಾಮವಾಗಿದ್ದು, ನಾನು ಏನೂ ಪ್ರಯತ್ನ ಮಾಡದಿದ್ದರೂ ತುಂಬಾ ಫ್ಯಾಷನೇಬಲ್ ಆಗಿ ಕಾಣುತ್ತಿದ್ದೇನೆ ಎಂಬ ಲುಕ್ ಕೊಡುವುದರಿಂದ ಎಲ್ಲರೂ ಇದನ್ನು ಇಷ್ಟಪಡುತ್ತಾರೆ. ಈ ವೈಡ್‌ಲೆಗ್ ಜೀನ್ಸ್ ಅದೇಕೆ ಇಂದು ಯುವಜನತೆಯ ಕ್ರೇಜ್ ಆಗಿದೆಯೋ ವಿಶ್ಲೇಷಿಸುವುದು ಕಷ್ಟ; ಆದರೆ, ಈಗ ಜನಪ್ರಿಯವಾಗಿರುವ ಈ ಫ್ಯಾಷನ್ ಟ್ರೆಂಡ್‌ನಿಂದಾಗಿ, ನಮ್ಮ ಗೆಳತಿಯರ ಗುಂಪು ಒಂದು ಪಾಠ ಕಲಿತ ವಿಷಯ ಸ್ವಾರಸ್ಯಕರವಾಗಿದೆ!

### ಗೆಳತಿಗೆ ಒತ್ತಾಯ

ನಾವೆಲ್ಲರೂ ವೈಡ್ ಲೆಗ್ಡ್ ಜೀನ್ಸ್‌ಗೆ ಮಾರುಹೋಗಿದ್ದರೂ, ನಮ್ಮ ಗುಂಪಿನಲ್ಲಿ ಒಬ್ಬಳು ಮಾತ್ರ ಟೈಟ್ ಜೀನ್ಸ್‌ನ ಕಟ್ಟಾ ಅಭಿಮಾನಿ. ಎಲ್ಲಿಗೆ ಹೋದರೂ ಅದೇ ಜೀನ್ಸ್. ಹಾಗೆ ನೋಡಿದರೆ ಆ ಜೀನ್ಸ್ ಅವಳ ವ್ಯಕ್ತಿತ್ವದ ಒಂದು ಭಾಗವೇ ಆಗಿಬಿಟ್ಟಿತ್ತು. ನಮಗೆ ಅವಳೂ ನಮ್ಮೆಲ್ಲರಂತೆ ಹೊಸ ಟ್ರೆಂಡಿ ಜೀನ್ಸ್ ಹಾಕಲಿ ಎನಿಸುತಿತ್ತು. ಅವಳಿಗೆ ಸ್ಕಿನ್ನಿ ಜೀನ್ಸ್ ಔಟ್, ವೈಡ್-ಲೆಗ್ಸ್ ಇನ್. ಇದರಲ್ಲಿ ನೀನು ಇನ್ನೂ ಸ್ಟೈಲಿಶ್ ಆಗಿ ಕಾಣುತ್ತೀಯ ಎಂದು ಸಾಕಷ್ಟು ಪುಸಲಾಯಿಸಿದೆವು.

ಮೊದಮೊದಲು ಹಿಂಜರಿ ದವಳು, ನಮ್ಮ ಒತ್ತಾಯದ ನಂತರ ಕೊನೆಗೂ ಒಪ್ಪಿದಳು. ಆದರೂ ಅವಳು ಮನಸ್ಸು ಬದಲಾಯಿಸಿದರೆ ಎಂದು ಹೆದರಿಕೆ; ಇದಕ್ಕೆ ಒಂದುಪಾಯ ಮಾಡಿ ದೆವು; ಅವಳ ಹುಟ್ಟುಹಬ್ಬಕ್ಕೆ ನಾವು ವೈಡ್ -ಲೆಗ್ಡ್ ಜೀನ್ಸ್‌ನ್ನೇ ಗಿಫ್ಟ್ ಮಾಡಿ ದೆವು. ನಮ್ಮ ಫ್ಯಾಷನ್ ಸಲಹೆ ಮತ್ತು ಗಿಫ್ಟ್‌ಗಾಗಿ ನಮಗೆ ದೊಡ್ಡ ಥ್ಯಾಂಕ್‌ಯೂ ಸಿಗುತ್ತದೆ ಎಂದು ಕೊಂಡಿದ್ದೆವು.

### ಕುಂಟಿದ್ದಾದರೂ ಏಕೆ?

ಆದರೆ ಆದದ್ದು ಮಾತ್ರ ಬೇರೆಯೇ! ವಾರದ ನಂತರ, ಊರಿಗೆ ಹೋಗಿ ಬಂದವಳು ಕುಂಟುತ್ತಿದ್ದಳು. ಕಾರಣ, ರಜಾದಿನದಲ್ಲಿ ಟ್ರೆಕ್ಕಿಂಗ್‌ಗೆ ಹೋಗಿದ್ದಾಗ, ಮುಗ್ಗರಿಸಿ ಬಿದ್ದಿದ್ದಳು. ಅದನ್ನು ಕಂಡು ಅಯ್ಯೋ ಪಾಪ ಎಂದು ಕನಿಕರ ಸೂಚಿಸಿದಾಗ ಅವಳು ನಮ್ಮ ಕಡೆ ನೋಡಿದ ರೀತಿ ಮಾತ್ರ ವಿಚಿತ್ರವಾಗಿತ್ತು. ಆ ಘಟನೆ ನಡೆಯಲು, ನಮ್ಮೆಲ್ಲರ ಒಳಸಂಚೇ ಕಾರಣ ಎನ್ನುವ ಭಾವನೆ ಅದರಲ್ಲಿತ್ತು.

ಏಕೆಂದರೆ, ಮುಗ್ಗರಿಸಿ ಬಿದ್ದು, ಕಾಲು ನೋವು ಮಾಡಿಕೊಳ್ಳುವ ದಿನ, ಅವಳು ತೊಟ್ಟಿದ್ದು ನಾವು ಕೊಟ್ಟ ಜೀನ್ಸ್!

ನಾವು ಏನೂ ಹೇಳಲಿಲ್ಲ. ನಿಜ ಹೇಳಬೇಕೆಂದರೆ ಹೇಳಲು ಏನೂ ಇರಲಿಲ್ಲ. ಸಿಟ್ಟು ಮತ್ತು ಬೇಸರದಿಂದ ಅವಳನ್ನು ನೋಡುತ್ತಾ ನಿಂತಿದ್ದೆವು. ಅವಳ ಮುಖ ಭಾವವು ನಮ್ಮನ್ನು ಅಪರಾಧಿಯಂತೆ ಮಾಡಿತು! ಅಯ್ಯೋ, ಈ ಜೀನ್ಸ್‌ನ್ನು ಗಿಫ್ಟ್ ಮಾಡಿದ್ದಕ್ಕೆ ಹೀಗೆ ಹೇಳಿಸಿ ಕೊಳ್ಳಬೇಕಾಯಿತು! ಎಂದು ನಮ್ಮ ಮನಸ್ಸನ್ನು ಚುಚ್ಚುತ್ತಿತ್ತು.

ಆದರೆ ಕಥೆ ಅಲ್ಲಿಗೆ ಮುಗಿಯಲಿಲ್ಲ. ಆ ದಿನದಿಂದ ಅವಳು ಕುಂಟುತ್ತಾ ನಡೆಯುವಾಗಲೆಲ್ಲಾ ನೀವೇ ನನಗೆ ವೈಡ್ ಲೆಗ್ ಜೀನ್ಸ್ ಗಿಫ್ಟ್ ಮಾಡಿದ್ದೀರಲ್ಲಾ, ಅದರಿಂದಲೇ ಬಿದ್ದೆ ನೆನಪಿರಲಿ! ಎಂದಂತೆ ಅನಿಸುತ್ತಿತ್ತು. ನಾವು ಟ್ರೆಂಡ್‌ನ್ನು ಪ್ರೋತ್ಸಾಹಿಸಿದ್ದೆವು, ಜೀನ್ಸ್‌ನ್ನು ಗಿಫ್ಟ್ ಮಾಡಿದ್ದೆವು, ಈಗ ಅವಳು ಟ್ರೆಕ್ಕಿಂಗ್‌ನಿಂದ ಬಿದ್ದ ಅನುಭವದೊಂದಿಗೆ ಹಿಂದಿರುಗಿದ್ದಳು. ಆ ಕ್ಷಣದಲ್ಲಿ ನಮ್ಮ ಫ್ರೀ ಫ್ಯಾಷನ್ ಕನ್ಸಲ್ಟೆಂಟ್ ವೃತ್ತಿ, ಗಿಫ್ಟ್ ಕೊಡುವ ರೂಢಿ ಎರಡನ್ನೂ ಬಿಟ್ಟುಬಿಡೋಣ ಎನಿಸಿದ್ದಂತೂ ನಿಜ!

### ಡೆಡ್ಲಿ ಪ್ಯಾಂಟ್ಸ್

ಅದಾದ ಕೆಲವು ದಿನಗಳ ನಂತರ ನಾನು ಡೆಡ್ಲಿ ಪ್ಯಾಂಟ್ಸ್ ಎಂಬ ಶೀರ್ಷಿಕೆಯ ಲೇಖನವನ್ನು ಓದಿದೆ. ಅತಿಯಾಗಿ ಅಗಲವಾಗಿರುವ ಅಥವಾ ಉದ್ದವಾಗಿರುವ ಪ್ಯಾಂಟ್‌ಗಳಿಂದ ಜನರು ಎಡವಿ ಬೀಳಬಹುದು, ಗಾಯಗೊಳ್ಳಬಹುದು ಎಂದು ಅದರಲ್ಲಿ ಹೇಳಲಾಗಿತ್ತು. ನಮ್ಮ ಫ್ರೆಂಡ್ ರೀತಿ ಮುಗ್ಗರಿಸಿ ಬಿದ್ದ ಅನೇಕರು ಅನುಭವಗಳನ್ನು ಹಂಚಿಕೊಂಡಿದ್ದರು. ಆಗ ಇದ್ದಕ್ಕಿದ್ದಂತೆ ಎಲ್ಲವೂ ಅರ್ಥವಾಯಿತು. ಇದು ಕೇವಲ ಫ್ಯಾಷನ್ ವಿಷಯವಾಗಿರಲಿಲ್ಲ, ಜನರ ಸುರಕ್ಷತೆಯ ವಿಷಯವಾಗಿತ್ತು!

ಪಾಪ, ನಮ್ಮ ಫ್ರೆಂಡ್ ತಾನು ಬಿದ್ದ ಕಥೆಯನ್ನು ಹೇಳುತ್ತಾ ಬೀರಿದ ನೋಟ ತಕ್ಷಣ ನೆನಪಾಯಿತು. ಅವಳಿಗೆ ಬೇಸರವಾಗಿದ್ದು ಸರಿಯಿದೆ ಅನಿಸಿತು! ಯೋಚಿಸುತ್ತಾ ಹೋದಂತೆ, ವೈಡ್-ಲೆಗ್ಡ್ ಜೀನ್ಸ್ ನೋಡಲು ತುಂಬಾ ಕೂಲ್ ಆಗಿರಬಹುದು. ಆದರೆ ಅದನ್ನು ಧರಿಸಿದಾಗ, ನಡೆಯಲು ಸ್ವಲ್ಪ ತಂತ್ರ, ಬ್ಯಾಲೆನ್ಸ್ ಮತ್ತು ಬಹುಶಃ ಸ್ವಲ್ಪ ಫಿಸಿಕ್ಸ್ ಜ್ಞಾನವೂ ಬೇಕು. ಜೀನ್ಸ್‌ನ ಕೆಳಭಾಗದ ಮೇಲೆ ಕಾಲಿಡದಂತೆ, ಮೆಟ್ಟಿಲಿನಲ್ಲಿ ಸಿಕ್ಕಿಕೊಳ್ಳದಂತೆ, ಅದರ ತಳಭಾಗವು ರಸ್ತೆಯನ್ನೇ ಗುಡಿಸದಂತೆ ಎಚ್ಚರ ವಹಿಸಬೇಕು.

ವೈಡ್-ಲೆಗ್ಡ್ ಜೀನ್ಸ್ ಆರಾಮದಾಯಕ, ಸ್ಟೈಲಿಶ್ ಮತ್ತು ಖಂಡಿತವಾಗಿಯೂ ಜನಪ್ರಿಯ. ಆದರೆ ಧರಿಸಿದಾಗ, ಸ್ವಲ್ಪ ಎಚ್ಚರ ಬೇಕು. ಈಗ ನಮ್ಮ ಅದೇ ಫ್ರೆಂಡ್ ಆಗಾಗ್ಗೆ ವೈಡ್-ಲೆಗ್ಡ್ ಜೀನ್ಸ್ ಹಾಕಿ ಕೊಳ್ಳುತ್ತಾಳೆ. ಆದರೆ ನಾವು, ಯಾರಿಗೂ ಯಾವುದೇ ಫ್ಯಾಷನ್ ಸಲಹೆ ಕೊಡುವುದಿಲ್ಲ. ಏಕೆಂದರೆ ಫ್ಯಾಷನ್ ಬದಲಾಗಬಹುದು, ಟ್ರೆಂಡ್‌ಗಳು ಬರಬಹುದು- ಹೋಗಬಹುದು; ಆದರೆ ಫ್ರೆಂಡ್‌ಗೆ ಒಂದು ಜೀನ್ಸ್ ಗಿಫ್ಟ್ ಮಾಡಿ, ಅವಳು ಅದನ್ನು ಧರಿಸಿ, ಎಡವಿ ಬಿದ್ದರೆ, ಗಾಯಮಾಡಿ ಕೊಂಡರೆ ಆ ವಿಷಯವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ, ಅಲ್ಲವೇ?

**- ಮಧುಮಿತಾ** ಸಿದ್ದೇಶ್ವರ್



# ರಾಮರಾಜ್ಯದಲ್ಲಿ ನಾಯಿಗೂ ದೊರೆತ ನ್ಯಾಯದ ಕಥೆ

ರಾಮಾಯಣ ಬರೆದ ವಾಲ್ಮೀಕಿ, ಮಹಾಭಾರತ ಬರೆದ ವೇದವ್ಯಾಸರಂಥ,ಮಹಾನ್ ಕವಿಗಳು ಯುಗ, ಯುಗಗಳಲ್ಲೂ ಪ್ರಾತಃಸ್ಮರಣೀಯರಾಗಿದ್ದಾರೆ ಎಂದರೆ, ಅವರು ಬರೆಯುವ ಕಾವ್ಯಶೈಲಿ. ದೊಡ್ಡ ದೊಡ್ಡ ಪ್ರಮುಖವಾದ ವಿಷಯಗಳ ನಡುವೆ ಸಣ್ಣ ಸಣ್ಣ ಸಂಗತಿಗಳನ್ನು ತಿಳಿಸುವ ಮೂಲಕ ಸಮಾಜಕ್ಕೆ ನೀತಿ ಪಾಠ ತಿಳಿಸುತ್ತಾರೆ. ರಾಮಾಯಣವನ್ನು ಬರೆದ ವಾಲ್ಮೀಕಿ ಮಹರ್ಷಿಗಳು ಆ ಕಾಲಘಟ್ಟದಲ್ಲಿ ನಡೆದ ಸಣ್ಣಸಣ್ಣ ಘಟನೆಗಳನ್ನು ನಮಗೆ ಮಾದರಿಯಾಗಿ ತೋರಿಸಿದ್ದಾರೆ. ರಾಮರಾಜ್ಯದಲ್ಲಿ, ಪ್ರಜೆಗಳಲ್ಲದೆ, ಆಹಾರ ಪದಾರ್ಥಗಳಾದ ಅಕ್ಕಿ-ರಾಗಿಗೆ ನ್ಯಾಯ, ಪ್ರಾಣಿ-ಪಕ್ಷಿಗಳಿಗೆ ಪ್ರೀತಿ (ಅಳಿಲು ಸೇವೆಗೆ ನ್ಯಾಯ), ನದಿಗಳು-ಪ್ರಕೃತಿ ಕುರಿತು ಕಾಳಜಿ, ಹೀಗೆ ಎಲ್ಲವನ್ನೂ ಓದುಗರ ಕಣ್ಣಮುಂದೆ ಚಿತ್ರಿಸಿದಂತೆ ರಂಜನೀಯವಾಗಿಯೂ, ಕಲಾತ್ಮಕವಾಗಿಯೂ, ಜೊತೆಗೆ ಸಮಾಜಕ್ಕೆ ಉಪಯುಕ್ತವಾದ ಸಂದೇಶಗಳನ್ನು ಕೊಡುವ ಮೂಲಕ ತಿಳಿಸುವ ಪರಿ ಅನನ್ಯವಾದದ್ದು.

ಈಗ ಹೇಳಹೊರಟಿರುವುದು ತ್ರೇತಾಯುಗದ ಶ್ರೀರಾಮನ ರಾಜ್ಯಾಡಳಿತದಲ್ಲಿ ನಾಯಿಯ ಕಷ್ಟಕ್ಕೂ ನ್ಯಾಯ ಒದಗಿಸಿದ ಒಂದು ಕಥೆ. ರಾಮನು ಸೀತಾ ಲಕ್ಷ್ಮಣ ಸಮೇತ ಹದಿನಾಲ್ಕು ವರ್ಷ ವನವಾಸವನ್ನು ಮುಗಿಸಿ ಬಂದ ಬಳಿಕ, ಶ್ರೀರಾಮಚಂದ್ರನಿಗೆ ಅಯೋಧ್ಯ ರಾಜನಾಗಿ ಪಟ್ಟಾಭಿಷೇಕವಾಯಿತು, ಭರತನನ್ನು ಯುವರಾಜನನ್ನಾಗಿ ಯೂ ಲಕ್ಷ್ಮಣನನ್ನು ಪ್ರಜೆಗಳ ಸಮಸ್ಯೆಗಳಿಗೆ ಪರಿಹಾರ ಮಾಡುವ ಜವಾಬ್ದಾರಿಯನ್ನು ವಹಿಸಿಕೊಡಲಾಯಿತು. ಲಕ್ಷ್ಮಣನ ಜವಾಬ್ದಾರಿ ಬಹಳ ಮುಖ್ಯವಾಗಿದ್ದು, ಅದನ್ನು ಯಶಸ್ವಿಯಾಗಿ ಮಾಡಿ ರಾಮರಾಜ್ಯ ಆಗಲು ಲಕ್ಷ್ಮಣನ ಪಾತ್ರವೂ ಇಲ್ಲಿ ಬಹಳ ಮುಖ್ಯವಾಯಿತು.

ಒಂದು ದಿನ ಅರಮನೆಯಲ್ಲಿ ಸಭೆ ನಡೆಯುತ್ತಿತ್ತು ಒಂದು ನಾಯಿ ಅರಮನೆಯ ದ್ವಾರದ ಬಳಿ ಬಂದು, ತನ್ನ ಮುಂದಿನ ಎರಡು ಕಾಲುಗಳನ್ನು ಎತ್ತಿ, ಹೋಓ ಓ, ಅಂತ ಹೊಯ್ಕೂತಿತ್ತು. ಅದರ ಕೂಗು ಅರಮನೆ ಸಭೆಗು ಕೇಳಿಸಿತು. ಲಕ್ಷ್ಮಣ ಹೊರಗೆ ಬಂದು ಯಾಕೆ ನೀನು ಗೋಳಾಡ್ತಾ ಇದೆ ನಿಂಗೇನು ಆಗಿದೆ ಎಂದು ಕೇಳಿದ. ಅದು ನಾಯಿನೆ ಆದರೂ ಅದರ ಬಿಗಿ ಅದು ಬಿಡಲಿಲ್ಲ. ನಾನು ನಿನಗೆ ಏನು ಹೇಳಲ್ಲ, ರಾಮನ ಹತ್ರಾನೇ ಹೇಳ್ತೀನಿ ಅಂತ ಹೇಳ್ತು. ಅದಕ್ಕೆ ಲಕ್ಷ್ಮಣ ನನ್ನ ಹತ್ತಿರ ಹೇಳು ನೀ ಏನ್ ಹೆದರಬೇಡ ನಾನ್ ಎಲ್ಲಾ ಸರಿ ಮಾಡುತ್ತೇನೆ ಅಂದ. ಹಾಗೆಲ್ಲ ಆಗಲ್ಲ ನನಗೆ ರಾಮನೇ ಬೇಕು ಅಂತ ಹಠ ಹಿಡೀತು. ಲಕ್ಷ್ಮಣ ಒಳಗೆ ಹೋಗಿ ರಾಮನಿಗೆ ತಿಳಿಸಲು, ರಾಮ ಅದನ್ನ ಒಳಗಡೆಗೆ ಕಳುಹಿಸು ಎಂದು ಲಕ್ಷ್ಮಣನಿಗೆ ಹೇಳಿದ. ನಾಯಿ ತಾನಾಗಿ ಅರಮನೆಯ ಸಭೆಗೆ ಬಂತು. ಬಂದಿದ್ದೇ, ಮೇಲೆ ಹೋಗಿ ರಾಮ ಸೀತೆಗೆ ನಮಸ್ಕಾರ ಮಾಡಿ ಕೆಳಗೆ ಬಂದು ನಿಂತಿತು. ಅದು ರಾಮರಾಜ್ಯದ ನಾಯಿ ಅದಕ್ಕೆ ಶಿಷ್ಟಾಚಾರ ಗೊತ್ತಿತ್ತು. ರಾಮನು ನಿನ್ನ ಸಮಸ್ಯೆ ಏನು, ಭಯ ಇಲ್ಲದೆ ಎಲ್ಲಾ ಹೇಳು ಅಂದ. ಅದಕ್ಕೆ ನಾಯಿಯು, ರಾಮ, ನೀನು ದಯಾಪರ, ಕರುಣಾಮಯಿ, ಇದೊಂದು ನಾಯಿ ಮುಂಡೇದು ಅಂತ ನಿರ್ಲಕ್ಷಿಸದೆ, ಹಾಗೂ ತಮಾಷೆಯಾಗಿ ತೆಗೆದುಕೊಳ್ಳದೆ, ಸರಿಯಾಗಿ ಗಮನಿಸಿ ನನಗೆ ನ್ಯಾಯ ಒದಗಿಸು ಅಂತ ಬೇಡಿತು.

ರಾಮನು ಭರವಸೆ ಕೊಟ್ಟ ಮೇಲೆ, ನೋಡು ರಾಮ ನಾನು ಯಾವ ತಪ್ಪನ್ನು ಮಾಡಿರಲಿಲ್ಲ. ದೇವಸ್ಥಾನದ ಮುಂದೆ ಮಲಗಿದ್ದೆ, ಅಲ್ಲಿಗೆ ಬಂದ ಸರ್ವಸಿದ್ಧೀ ಕೆಂಪ ಸನ್ಯಾಸಿ ನನ್ನನ್ನು ಕೋಲಿನಿಂದ ಹಣೆಗೆ ರಕ್ತ ಬರುವಂತೆ ಹೊಡೆದಿದ್ದಾನೆ. ಯಾಕೆ ಅಂತ ನನಗೂ ಗೊತ್ತಿಲ್ಲ. ರಾಮ, ನಿನ್ನ ರಾಜ್ಯದಲ್ಲಿ ನಿರಪರಾಧಿಗಳಿಗೆ ಅನ್ಯಾಯ ಆಗಲು ನೀನು ಬಿಡಬಾರದು ನನಗೆ ನ್ಯಾಯ ಕೊಡು ಎಂದಿತು. ಶ್ರೀರಾಮನ ಸರ್ವಸಿದ್ದಿ ಸನ್ಯಾಸಿಯನ್ನು ಕರೆಸಿ ಕೇಳಿದ.

ಅವನು ನಾಯಿಗೆ ಹೊಡೆದೆ ಎಂಬುದನ್ನು ಒಪ್ಪಿಕೊಂಡ. ಇಂತಹ ಒಂದು ವಿಚಿತ್ರವಾದ ಅಪರಾಧ ಇರುವುದು ಇದೇ ಮೊದಲು, ಇದಕ್ಕೇನು ಶಿಕ್ಷೆ ಎಂದು ಕೊಂಡ ರಾಮನು, ಇವನಿಗೆ ಯಾವ ಶಿಕ್ಷೆ ಕೊಡಲಿ ನೀನೇ ಹೇಳು ಎಂದು ನಾಯಿಯನ್ನೇ ಕೇಳಿದ. ನಾಯಿ ಹೇಳಿತು, ಪ್ರಜಾ ಪರಿಪಾಲಕ ರಾಮಾ ನನ್ನ ಹತ್ತಿರ ಒಂದು ಉಪಾಯ ಇದೆ. ಎಂತಹ ಶಿಕ್ಷೆ ಕೊಡಬೇಕು ಎಂದರೆ, ಇಲ್ಲೇ ಹತ್ತಿರದಲ್ಲಿ ಕಾಲಂಜರಗಿರಿ ಎನ್ನುವ ಪ್ರಸಿದ್ಧವಾದ ದೇವಸ್ಥಾನವಿದೆ. ಅಲ್ಲಿನ ಧರ್ಮಾಧಿಕಾರಿಯಾಗಿ ಇವನನ್ನು ನೇಮಿಸಬೇಕು ಎಂದಿತು. ಈ ತೀರ್ಪನ್ನು ಕೇಳಿದ ಸಭಿಕರೆಲ್ಲರಿಗೂ ತುಂಬಾ ಆಶ್ಚರ್ಯವಾಯಿತು.

ತಪ್ಪು ಮಾಡಿದವನಿಗೆ ಧರ್ಮದರ್ಶಕ ಸ್ಥಾನವೇ? ಎಂದುಕೊಡರೆ, ರಾಮ ಮರುಮಾತಾಡದೆ, ನಾಯಿ ಹೇಳಿದಂತೆ ಸರ್ವ ಸಿದ್ಧಿ ಸನ್ಯಾಸಿಗೆ ಧರ್ಮಾಧಿಕಾರಿ ಪಟ್ಟವನ್ನು ಕೊಟ್ಟು, ಗೌರವದಿಂದ ಆನೆಯ ಮೇಲೆ ಕೂರಿಸಿ ಕಾಲಿಂಜರ್ ಮಠಕ್ಕೆ ಕಳುಹಿಸಿದ. ಸರ್ವಸಿದ್ಧಿ ಸಂನ್ಯಾಸಿ ಇದರಿಂದ ಖುಷಿಯಾಗಿ ಒಳಗೊಳಗೆ ಸಂತೋಷಗೊಂಡು ಮಠಕ್ಕೆ ಹೋದನು.

ಆ ಮೇಲೆ ಸಭಿಕರ ಕುತೂಹಲಕ್ಕೆ, ನಿನಗೆ ಹೊಡೆದ ಆ ಸನ್ಯಾಸಿಗೆ ಗೌರವದ ಧರ್ಮಾಧಿಕಾರಿಯಾಗುವಂತ ಶಿಕ್ಷೆ ಕೊಟ್ಟ ಹಿಂದಿನ ಕಾರಣವನ್ನು ಕೇಳುತ್ತಾನೆ. ನಾಯಿ ಹೇಳಿತು. ಹಿಂದಿನ ಜನ್ಮದಲ್ಲಿ ಈ ಮಠಕ್ಕೆ ನಾನೇ ಮುಖ್ಯ ಮಹಂತನಾಗಿದ್ದೆ. ಇದರಿಂದಾಗಿಯೇ ನನಗೆ ನಾಯಿ ಜನ್ಮ ಬಂದಿದೆ ಎಂದಾಗ, ರಾಮ ಆಶ್ಚರ್ಯದಿಂದ ಯಾಕೆ ಎಂದು ಕೇಳಿದ.

ಅದಕ್ಕೆ ನಾಯಿ, ನನ್ನ ಮತ್ತು ಜನರ ಆಧ್ಯಾತ್ಮಿಕ ಕಲ್ಯಾಣ ಉದ್ದೇಶವಿಟ್ಟುಕೊಂಡು ನನ್ನನ್ನು ಕಾಲಿಂಜರ್ ಮಠದ ಧರ್ಮಾಧಿಕಾರಿಯಾಗಿ ಮಾಡಿದ್ದರು. ನಾನು ಸಹ ಒಳ್ಳೆಯ ಉದ್ದೇಶಕ್ಕೆ ಧರ್ಮಾಧಿಕಾರಿಯಾದೆ ಮತ್ತು ಮಠದ ಅಭಿವೃದ್ಧಿಗೆ ಜನಗಳು ಸಂತೋಷವಾಗಿರಲು ಶ್ರಮವಹಿಸಿ ಕೆಲಸ ಮಾಡಿದೆ. ಇದನ್ನೆಲ್ಲಾ ನೋಡಿದ ಜನ ನನ್ನನ್ನು ತಮ್ಮ ಗುರುವೆಂದು ತಿಳಿದು ಅದೆಷ್ಟು ಮರ್ಯಾದೆ ಕೊಡುತ್ತಿದ್ದರು ಎಂದರೆ, ನಾನು ಹೇಳಿದ್ದೇ ವೇದವಾಕ್ಯವಾಯಿತು, ನಾನು ಮಾಡಿದ್ದೆ ಶಾಸನವಾಯಿತು. ನಾನೇನು ಅಂಥ ಘನಂದಾರಿ ಕೆಲಸ ಮಾಡಿಲ್ಲವೆಂದು ಕೊಂಡರು, ಜನ ಮಾತ್ರ ನಾನು ಹೇಳಿದ್ದನ್ನೇ ಕೇಳತೊಡಗಿದರು. ಇದರಿಂದ ನನ್ನ ಮನಸ್ಸು ವಿಚಲಿತವಾಯಿತು. ನಂತರದ ದಿನಗಳಲ್ಲಿ ನಾನು ಅಹಂಕಾರದಿಂದ ಮೆರೆದೆ. ನಾನು ಸರ್ವ ಶ್ರೇಷ್ಠ ವ್ಯಕ್ತಿ ಎಂದು ಬೀಗಿದೆ. ನನ್ನ ಅವಶ್ಯಕತೆಗೆ ಅನುಕೂಲವಾಗುವಂತೆ ಏನೇನು ಬೇಕು ಎಲ್ಲವನ್ನು ಜನಗಳಿಂದ ಕೇಳಿ ಪಡೆದುಕೊಂಡೆ.

ದಿನೇ ದಿನೇ ಹೆಚ್ಚಾಗುತ್ತಿರುವ ಹೆಸರು, ಕೀರ್ತಿ, ಅಧಿಕಾರ, ನನ್ನನ್ನು ಮತಿ ಭ್ರಷ್ಟನನ್ನಾಗಿ ಮಾಡಿಸಿತು. ತಪ್ಪು ಮಾಡುತ್ತಿದ್ದೇನೆ ಎಂದು ಗೊತ್ತಿದ್ದರೂ. ಮಠದ ದೊಡ್ಡ ಮಹಾಂತನ ಸೋಗು ಹಾಕಿಕೊಂಡು ಓಡಾಡುತ್ತಿದ್ದೆ.

ನನ್ನ ನೈತಿಕತೆ ಕಾಲ ಕಸವಾಯಿತು. ದರ್ಪ, ಅಧಿಕಾರ, ಗೌರವ, ಮತ್ತು ಅಹಂಕಾರದಲ್ಲಿ ಮುಳಗಿ ದೂರ ಬಹು ದೂರ ಸಾಗಿ ಕೆಸರಿನ ಹೊಂಡದಲ್ಲಿ ಮುಳುಗಿಬಿಟ್ಟೆ. ಆದರೆ ಮತ್ತೆಂದೂ ಮೇಲೆ ಬರಲು ಆಗಲಿಲ್ಲ. ಹೋದ ಜನ್ಮದಲ್ಲಿ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವಾಗಿ ಈಗ ನಾಯಿಯಾಗಿ ಜನ್ಮತಾಳಿ ಶಿಕ್ಷೆ ಅನುಭವಿಸುತ್ತಿದ್ದೇನೆ. ಈಗ ನನಗೆ ಹೊಡೆದ ಸರ್ವಸಿದ್ಧಿ ಸನ್ಯಾಸಿ ಕೂಡ ಈ ಜನ್ಮದಲ್ಲಿ ಧರ್ಮಾಧಿಕಾರಿಯಾಗಿ ಮೆರೆಯಲಿ ಮುಂದಿನ ಜನ್ಮದಲ್ಲಿ ನನ್ನ ಹಾಗೆ ನಾಯಿಯಾಗಿ ಹುಟ್ಟಿ ಶಿಕ್ಷೆ ಅನುಭವಿಸಲಿ ಎಂದಿತು. ರಾಮನು, ನೀನು ಅದು ಹೇಗೆ ಹೇಳುತ್ತಿ? ಅವನು ಒಳ್ಳೆಯ ಕೆಲಸ ಮಾಡಬಹುದಲ್ಲವೇ? ಎಂದಾಗ, ಸಾಧ್ಯವೇ ಇಲ್ಲ ಅಧಿಕಾರ ಬರುವವರೆಗೆ ಹಾಗೆ, ಅಧಿಕಾರ ಬಂದಮೇಲೆ ಆಮೇಲೆ ನೆತ್ತಿಗೇರುತ್ತೆ. ಇದರಿಂದ ಯಾರು ಹೊರತಾಗಿರಲು ಸಾಧ್ಯವಿಲ್ಲ ಎಂದಿತು. ನಾಯಿ ಬುದ್ಧಿವಂತಿಕೆಯ ಮಾತು ಕೇಳಿ ರಾಮನು ಹಾಗೂ ಸಭಿಕರು ಜೋರಾಗಿ ನಕ್ಕರು.

ಮಧುಸಿಕ್ತೋ ನಿಂಬಖಂಡ,  
ದುಗ್ದ ಪುಸ್ತೋ ಭುಜಂಗಮ!  
ಗಂಗಾಸ್ನಾತೋಪಿ  
ದುರ್ಜನ, ಸ್ವಭಾವಂ ನೈವ  
ಮುಂಚತಿ!

ಬೇವಿನ ಕಾಂಡಕ್ಕೆ ಜೇನುತುಪ್ಪವನ್ನು ಹಚ್ಚಿದರೂ, ಹಾವಿಗೆ ಹಾಲನ್ನು ಎರೆದರೂ ದುರ್ಜನರು ಗಂಗೆಯಲ್ಲಿ ಸ್ನಾನ ಮಾಡಿದರೂ, ಯಾರ ಸ್ವಭಾವ ಕೂಡ ಬದಲಾಗದು.

**- ಆಶಾ** ನಾಗಭೂಷಣ.



> ನಗು ಕೇವಲ ಸಂತೋಷದ ದ್ಯೋತಕವಲ್ಲ, ಅದು ಜೀವನದ ಮೇಲಿನ ಭರವಸೆ, ಸಕಾರಾತ್ಮಕತೆ ಮತ್ತು ಸೌಹಾರ್ದತೆಯ ಸಂಕೇತ. ಅಳು ಕೂಡ ಅತ್ಯಂತ ಆಳವಾದ ಮತ್ತು ಶಕ್ತಿಯುತವಾದ ಭಾವನೆ. ಬದುಕಿನ ನಾಣ್ಯಕ್ಕೆ ಎರಡು ಮುಖಗಳಿದ್ದಂತೆ! ನಗುವಿಲ್ಲದೆ ಅಳು ಹುಟ್ಟಲಾರದು; ಅಳು ಇಲ್ಲದೆ ನಗು ಹುಟ್ಟಲಾರದು. ಇದೊಂದು ನಗುವಿನ ಕಥೆ ಮತ್ತು ಚರಿತ್ರೆ.

# ಹೆದ್ದಾರಿಯ ಮೇಲೊಂದು ತುಣುಕು ನಗೆ!



ಪ್ರಸ್ತುತ ಆಧುನಿಕ ಜೀವನ ಕ್ರಮವು ನಗುವುದನ್ನೇ ನುಂಗಿ ಬಿಟ್ಟಿದೆ. ನನ್ನ ಬೆಲ್ಲದಚ್ಚಿನ ಬೊಂಬೆಯೇ ನೀನು ನಕ್ಕರೊಂದು ರುಚಿ, ನೀನು ಅತ್ತರೊಂದು ರುಚಿ ಎನ್ನುವ ಬೇಂದ್ರೆ ಅವರ ಮಾತಿದು. ನಗು ಮತ್ತು ಅಳು ಎರಡು ಕೂಡ ರುಚಿಯೇ. ಒಂದು ಹಿತ ಮತ್ತೊಂದು ಅಹಿತ ಎನ್ನಲಾಗದು. ಪ್ರತಿಯೊಂದು ಜೀವಿಯಲ್ಲಿಯೂ ಈ ಎರಡು ರೇಖೆಗಳು ಹಾದು ಹೋಗುತ್ತವೆ. ಜೊತೆಗೆ ಒಂದೆಡೆಗೆ ಸಂಧಿಸುತ್ತವೆ. ಬದುಕಿಗೆ ಬಂದ ಅವಳಿಗಳು ಹಾಗೂ ಉಸಿರಿನ ಉದ್ದಕ್ಕೂ ಸಿಗುವ ಬಳುವಳಿಗಳು, ಭಾವದ ಬಳ್ಳಿಗಳು. ಒಂದು ಪರಿಸರದಲ್ಲಿ ಉತ್ಪನ್ನಗೊಳ್ಳುವ ಸ್ಥಾಯಿಗಳಾಗುತ್ತವೆ. ಈ ಭಾವನೆಗಳ ವ್ಯಾಪಾರದ ಮೂಲ- ಮನಸ್ಸು. ಈ ಅಳುವಿನ ಫಿಲಾಸಫಿ ಗಂಭೀರವಾದದ್ದು.

ನಗು ಕೇವಲ ಸಂತೋಷದ ದ್ಯೋತಕವಲ್ಲ, ಅದು ಜೀವನದ ಮೇಲಿನ ಭರವಸೆ, ಸಕಾರಾತ್ಮಕತೆ ಮತ್ತು ಸೌಹಾರ್ದತೆಯ ಸಂಕೇತ. ಅಳು ಕೂಡ ಅತ್ಯಂತ ಆಳವಾದ ಮತ್ತು ಶಕ್ತಿಯುತವಾದ ಭಾವನೆ. ಬದುಕಿನ ನಾಣ್ಯಕ್ಕೆ ಎರಡು ಮುಖಗಳಿದ್ದಂತೆ! ನಗುವಿಲ್ಲದೆ ಅಳು ಹುಟ್ಟಲಾರದು; ಅಳು ಇಲ್ಲದೆ ನಗು ಹುಟ್ಟಲಾರದು. ಇದೊಂದು ನಗುವಿನ ಕಥೆ ಮತ್ತು ಚರಿತ್ರೆ.

ನಗುವ ಒಂದು ರಿಯಲ್ ವಿಡಿಯೋ ರಿಲೆಯಂತೆ ಓಡುತ್ತದೆ. ಒಂದು ಸಣ್ಣ ನಗು ಜಗತ್ತನ್ನು ಆಳುತ್ತದೆ. ಒಂದು ತುಂಡು ರೀಲ್ಸ್ ಜನರನ್ನು ಮೆಚ್ಚಿಸುತ್ತದೆ. ಲೋಕವನ್ನೆಲ್ಲ ಸುತ್ತಿ, ಮಿಲಿಯನ್ಸ್ ಜನರ ಹೃದಯಗಳನ್ನು ಗೆಲ್ಲುತ್ತದೆ. ಹಾಗೆ ಆಕರ್ಷಿಸಿದ ನಗುವೊಂದು ಚರಿತ್ರೆಯಾಗಿ ಮೆರೆಯುತ್ತದೆ ಎಂದು ಯಾರು ಊಹಿಸಿರಲಿಲ್ಲವೇನೋ. ನಕ್ಕ ಹುಡುಗನಿಗೂ ಇದು ನಿರೀಕ್ಷೆ ಇರಲಿಲ್ಲ.

ಸುಮಾರು ಹದಿಮೂರು, ಹದಿನಾಲ್ಕನೇ ವಯಸ್ಸಿವನಂತೆ ಕಾಣುವ ಆ ಹಳ್ಳಿ ಹುಡುಗನ ಮುಗ್ಧ ಪರಿಪೂರ್ಣ ನಗು, ಲೋಕ ವಿಖ್ಯಾತಿ ಆಗುತ್ತದೆ ಎಂದು ಕನಸು ಮನಸ್ಸಿನಲ್ಲೂ ಅಂದುಕೊಂಡಿರಲಿಲ್ಲವೇನೋ! ಅವನು ಟೀ ಕುಡಿಯುತ್ತಿರುವ ಒಂದು ತುಣುಕು ನಗೆ ಸಾಮಾಜಿಕ ಜಾಲತಾಣದಲ್ಲಿ ಸಿಕ್ಕಾಪಟ್ಟೆ ವೈರಗುತ್ತದೆ. ಅದು ತೆಲಂಗಾಣದ ಒಂದು ಹೆದ್ದಾರಿಯ ಮೇಲೊಂದು ಜಾಗ. ರಸ್ತೆ ಬದಿಯಲ್ಲಿನ ಚಹಾ ಅಂಗಡಿ.

ಕೈಯಲ್ಲಿ ಕಾದ ಚಹಾ ಕಪ್ ಹಿಡಿದ ಆ ಹುಡುಗನು, ಯಾರೋ ಹೇಳಿದ ತಮಾಷೆಯ ಮಾತಿಗೆ ಬಿದ್ದು ಬಿದ್ದು ನಗುತ್ತಿದ್ದ. ಹಾಗೆ ನಗುವ ಹುಡುಗನ ಹೆಸರು ಅರುಣ. ಈತ ಟ್ರಕ್ಕಿನ ಕ್ಲೀನರ್! ಆ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದವನು ನೆಹರು. ಈತ ಟ್ರಕ್ಕಿನ ಮಾಲೀಕ!

ಅದು ಸಾಮಾಜಿಕ ಜಾಲತಾಣ ತಲುಪಿದ ಮೇಲೆ ಆ ವೀಡಿಯೊ ಕ್ಲಿಪ್ ಎಲ್ಲಾ ಕಡೆ ಆಕ್ರಮಿಸಿತು. ಎಷ್ಟೋ ದೂರ ತಲುಪಿತು. ಮೀಮ್ಸ್, ರೀಲ್, ಮಿಲಿಯನ್ಸ್ ಶೇರ್‌ಗಳಿಗೆ ಒಳಗಾಗುತ್ತಲೇ ಇದೆ. ಜಗತ್ತಿನ ಪರಿವೆಯಿಲ್ಲದ ಆ ಹುಡುಗನ ದಿನಚರಿಯೇ ಬೇರೆ. ಕಿತ್ತು ತಿನ್ನುವ ಬಡತನ. ಅರ್ಧಕ್ಕೆ ಶಾಲೆ ತೊರೆದು ಅದೆಷ್ಟೋ ವರ್ಷಗಳಾಗಿ, ಹೆದ್ದಾರಿಯ ಮೇಲೊಂದು ಜೀವನ. ಅದೇ ಅವನ ದಿನನಿತ್ಯದ ಬದುಕಿನ ಪಾಠಶಾಲೆ. ಟ್ರಕ್ಕಿನ ಸರಕು ತುಂಬುವುದು, ಅದನ್ನು ಕ್ಲೀನ್ ಮಾಡೋದು, ಗ್ರೀಸ್ ಇಡೋದು, ಪಂಚರ್ ಆದಾಗ ಟೈರ್ ಬದಲಿಸುವುದು. ಅಲ್ಲಲ್ಲಿ ಚಹಾದ ಅಂಗಡಿಗಳ ಮುಂದೆ ಟೀ ಕುಡಿಯುವ ವಿರಾಮ- ಇದು ಅವನ ಬದುಕಿನ ಕಾಯಕದ ದಾರಿ.

### ಪ್ರವಾಸಿ ಮಾರ್ಗದರ್ಶಿ

ಮೇಲ್ನೋಟಕ್ಕೆ ಅದೇನು ಮುದ್ದಾದ ನಗುವೇನು ಅಲ್ಲ. ಅವನು ಸುಂದರವಾಗಿ ಏನು ಕಾಣುವುದಿಲ್ಲ. ಉದ್ದಕ್ಕೆ ಬೆಳೆದಂತೆ ಕಾಣುವ ಕೂದಲುಗಳು ಚದುರಿ ಹೋಗಿವೆ. ಒಳ್ಳೆಯ ಬಟ್ಟೆ ತೊಟ್ಟವನಲ್ಲ. ಆದರೆ ಅವನ ಮನ ತುಂಬಿದ ನಗು ಮನ ಸೋಲುವಂತೆ ಮಾಡಿದೆ. ಅವನ ಅವಸ್ಥೆಯನ್ನೇ ಮರೆಸಿ ಬಿಡುತ್ತದೆ. ನಗುವೊಂದು ಅವನ ನಿಜ ಸ್ವರೂಪವನ್ನು ಮರೆಮಾಚಿ ಬಿಟ್ಟಿದೆ. ಇದು ಬಹುದೊಡ್ಡ ತಾತ್ವಿಕತೆ. ನಾವು ನಮ್ಮ ಸಂಕಟಗಳನ್ನ ಹೀಗೆ ಮರೆಯುವಂತೆ ನಗಬೇಕೇನೋ! ಒಂದು ನಗು ಜಗತ್ತನ್ನೇ ತಿರುಗಿ ನೋಡಿಸುವಂತೆ ಮಾಡುತ್ತದೆ ಎಂದರೆ ಅದರ ಶಕ್ತಿ ಎಂತಹದ್ದು ಎಂದು ಅರ್ಥವಾಗುತ್ತದೆ.

ಆ ವೀಡಿಯೊ ಶೇರ್ ಮಾಡಿದ ಯಾರೊಬ್ಬರಿಗೂ ಆ ಹುಡುಗನ ನಿಜವಾದ ಕಥೆ ಗೊತ್ತಿರಲಿಕ್ಕಿಲ್ಲ. ಅರುಣ್ ನಾಲ್ಕನೇ ತರಗತಿಯಲ್ಲಿದ್ದಾಗಲೇ ಶಾಲೆಯಿಂದ ವಂಚಿತನಾದವನು. ಮುಂದೆ ಟ್ರಕ್ ಕ್ಲೀನರ್ ಆದ. ಅವನು ಮನತುಂಬಿ ನಕ್ಕ ಬರಿ 15 ಸೆಕೆಂಡಿನ ವೀಡಿಯೊ ಲಕ್ಷಾಂತರ ಜನರ ಮುಖದಲ್ಲಿ ಮಂದಹಾಸ ಉಕ್ಕಿಸುವಂತಿದೆ.

ಒಂದು ಕಡೆ ಅಂತರ್ಜಾಲದಲ್ಲಿ ಆ ನಗು ಜಲಪಾತದಂತೆ ಕಾಮೆಂಟ್‌ಗಳಿಂದ ರಭಸವಾಗಿ ಹರಿಯುತ್ತಿದೆ. ಆದರೆ, ತನ್ನ ಬಗ್ಗೆ ಜನ ಏನೆ ಬರೆದಿದ್ದಾರೆ ಎಂದು ಓದಲು ಅವನಿಗೆ ಅಕ್ಷರವೇ ಬರುತ್ತಿರಲಿಲ್ಲ! ಆ ನಗು ಜಾಲತಾಣದಲ್ಲಿ ಹೊಸ ಸಂಚಲನದ ಅಲೆ ಎಬ್ಬಿಸಿದೆ.

ಇದ್ಯಾವುದರ ಪರಿವೂ ಅವನಿಗಿಲ್ಲ, ಇದರ ಹಿಂದಿರುವ ನೋವು ಎಂತದ್ದು ಅಂತ ಒಮ್ಮೆ ನೆಹರು ವಿಭಿನ್ನವಾಗಿ ಯೋಚಿಸಿದ. ಆಮೇಲೆ ಆತ ಮಾಡಿದ್ದು ಹೀಗೆ- ಅರುಣನಿಗೆ ಪುಸ್ತಕಗಳನ್ನು ತೆಗೆದು ಕೊಟ್ಟ. ಪರೀಕ್ಷಾ ಶುಲ್ಕ ಕಟ್ಟಿದ. ಹೆರಿಯ ತಂಗುದಾಣಗಳಲ್ಲಿ, ಚಹಾ ಕುಡಿಯುವ ವಿರಾಮದ ವೇಳೆಯಲ್ಲಿ ಅವನಿಗೆ ಓದುವುದು, ಬರೆಯುವುದು ಮತ್ತು ಗಣಿತ ಕಲಿಸಲು ಶುರು ಮಾಡಿದ. ಅವನ ಬದುಕಿಗೊಂದು ಅರ್ಥ ಕೊಡಬೇಕು. ಆ ನಗುವಿಗೊಂದು ಸಾರ್ಥಕತೆ ಕೊಡಬೇಕು ಚಿಂತಿಸಿದ.

ಫಲವಾಗಿ 2026ರಲ್ಲಿ ಅರುಣ್ 10ನೇ ತರಗತಿ ಪರೀಕ್ಷೆ ಬರೆದು, ಉತ್ತೀರ್ಣನೂ ಆದ! ಆತನ ಮಾತುಗಳ ಹೇಳುವುದಾದರೆ:, ನೆಹರೂ ಅಣ್ಣಾ ನನಗೆ ದೇವರಿದ್ದಂತೆ. ಅವರ ಹಠವೇ ಇಲ್ಲದಿದ್ದರೆ, ನಾನು 10ನೇ ತರಗತಿವರೆಗೆ ಓದಲು ಸಾಧ್ಯವೇ ಇರುತ್ತಿರಲಿಲ್ಲ! ಲಕ್ಷಾಂತರ ಜನರು ಅರುಣ್ ನಗುವುದನ್ನು ನೋಡಿ ಆನಂದಿಸಿದರು. ಆದರೆ ಒಬ್ಬ ವ್ಯಕ್ತಿ ಮಾತ್ರ ಅವನಿಗೆ ನಿಜವಾಗಿ ನೆರವಾಗಲು ಮುಂದಾದ. ಮಾರ್ಗದರ್ಶನಕ್ಕೆ ಮೂಲಸೌಕರ್ಯಗಳೇ ಇರಬೇಕಂತಿಲ್ಲ. ನೆಹರೂ ಸರಕು ತಲುಪಿಸುವ ನಡುವೆಯೇ ಚಲಿಸುವ ಟ್ರಕ್ ನಲ್ಲಿ ಅವನಿಗೆ ಪಾಠ ಹೇಳಿಕೊಟ್ಟ. ಅಗತ್ಯವಿರುವಲ್ಲಿ ಸಮಯವಿಲ್ಲ, ವ್ಯವಸ್ಥೆ ಇಲ್ಲ ಎನ್ನುವುದು ನೆಪ ಮಾತ್ರ ಎನಿಸುತ್ತದೆ.

**- ಡಾ.ಎಲ್ಲಪ್ಪ ಜಿ.**ಕಲಾದಗಿ

# ವಿಬಿಜಿ ರಾಮ್ ಜಿ: 125 ದಿವಸ ಉದ್ಯೋಗ



• ಪ್ರಜೋದಯ ವರದಿ

**ಹಾಸನ:** ವಿಬಿಜಿ ರಾಮ್ ಜಿ ಯೋಜನೆಯಡಿ ಒಂದು ನೋಂದಾಯಿತ ಕುಟುಂಬಕ್ಕೆ ವರ್ಷದಲ್ಲಿ 125 ದಿವಸ ಉದ್ಯೋಗ, ಒಂದು ದಿನಕ್ಕೆ 382 ರೂ. ಕೂಲಿ ಮೊತ್ತ ನೀಡಲಾಗುತ್ತಿದೆ ಎಂದು ಹನುಮಂತಪುರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವೇಣುಗೋಪಾಲ್ ಅವರು ತಿಳಿಸಿದ್ದಾರೆ.

ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಆಜೀವಿಕ ಮಿಷನ್ (ಗ್ರಾಮೀಣ) ಯೋಜನೆಯಡಿ ಜಾಬ್ ಕಾರ್ಡ್ ಮೇಳ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಸಾರ್ವಜನಕರಿಗೆ ವಿಬಿಜಿ ರಾಮ್ ಜಿ ಬಗ್ಗೆ ಮಾಹಿತಿ ನೀಡಿದರು.

ಹನುಮಂತಪುರ ಗ್ರಾಮ ಪಂಚಾಯಿತಿಯಲ್ಲಿ ಸೆ.15 ರ ವರೆಗೆ ಜಾಬ್ ಕಾರ್ಡ್ ಮೇಳ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮದಡಿ ಮನೆ ಮನೆ ಬೇಟಿ ಮತ್ತು ಸಾರ್ವಜನಿಕ ಸ್ಥಳಗಳಾದ ಹಾಲಿನ ಡೈರಿ, ಅರಳಿಕಟ್ಟೆ, ಟೀ ಅಂಗಡಿ, ರೇಷನ್ ಅಂಗಡಿ ಮುಂತಾದ ಸ್ಥಳಗಳಲ್ಲಿ ಜಾಬ್ ಕಾರ್ಡ್ ಮೇಳ ಬ್ಯಾನರ್ ಹಿಡಿದು ವಿಬಿಜಿ ರಾಮ್ ಜಿ ಮಾಹಿತಿ ಇರುವ ಕರಪತ್ರ ನೀಡುವ ಮೂಲಕ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಆಜೀವಿಕ ಮಿಷನ್ ಯೋಜನೆ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಕಸದ ಸ್ವಚ್ಛ ವಾಹಿನಿ, ಡಂಗೂರ ಮೂಲಕ ಪ್ರಚಾರ ಮಾಡಿ ಜಾಗೃತಿ ಅಭಿಯಾನ ಕೈಗೊಂಡು ಸಾರ್ವಜನಿಕರಿಗೆ ಮಾಹಿತಿ ನೀಡಲಾಗುತ್ತಿದೆ. ಒಂದು ನೋಂದಾಯಿತ ಕುಟುಂಬವು ಜೀವಿತಾವಧಿಯಲ್ಲಿ 5 ಲಕ್ಷ ರೂ. ವರೆಗೆ ಆರ್ಥಿಕ ನೆರವು ಪಡೆಯಬಹುದು. ಈಗಾಗಲೇ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾಗಿರುವ ವೈಯಕ್ತಿಕ ಕಾಮಗಾರಿಗಳನ್ನು ನಿರ್ಮಾಣ ಮಾಡಿಕೊಳ್ಳಲು ಸಾರ್ವಜನಿಕರಿಗೆ ಕಾರ್ಯಾದೇಶ ಪ್ರತಿಯನ್ನು ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

## ಸೆ.24ರ ವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ

# ಮತದಾರರಪಟ್ಟಿ: ಹೆಸರು ಖಚಿತಪಡಿಸಿಕೊಳ್ಳಿ

• ಪ್ರಜೋದಯ ವರದಿ



**ಅರಕಲಗೂಡು:** ವಿಧಾನಸಭಾ ಕ್ಷೇತ್ರದ ಮತದಾರರ ಕರಡು ಪಟ್ಟಿ ಪ್ರಕಟಿಸಲಾಗಿದ್ದು, ಪ್ರತಿಯೊಬ್ಬ ಮತದಾರರೂ ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಖಚಿತಪಡಿಸಿಕೊಳ್ಳಬೇಕೆಂದು ತಹಸೀಲ್ದಾರ್ ಕೆ.ಸಿ.ಸೌಮ್ಯ ಹೇಳಿದರು.

ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಎಸ್ಐಆರ್ (ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ) ಕುರಿತು ಮಾಹಿತಿ ನೀಡಿದ ಅವರು, ಮತದಾರರ ಪಟ್ಟಿ ಪರಿಷ್ಕರಣಾ ಕಾರ್ಯ ಅಂತಿಮ ಹಂತ ತಲುಪಿದೆ. ಕರಡು ಪಟ್ಟಿಗೆ ಸೆ. 24ರ ವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶವಿದ್ದು, ಸ್ವೀಕೃತ ಆಕ್ಷೇಪಣೆಗಳನ್ನು ಪರಿಶೀಲಿಸಿ ಚುನಾವಣಾ ಆಯೋಗದ ನಿರ್ದೇಶನದಂತೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದರು.

ಅರಕಲಗೂಡು ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,36,667 ಮತದಾರರಿದ್ದು, ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಶೇ. 100ರಷ್ಟು ಗಣತಿ ನಮೂನೆಗಳನ್ನು ಸರಬರಾಜು ಮಾಡಲಾಗಿದೆ. ಜೂ. 30ರಿಂದ ಆ. 30ರವರೆಗೆ ಮನೆಮನೆಗೆ ಭೇಟಿ ನೀಡಿ ಗಣತಿ ನಮೂನೆಗಳ ವಿತರಣೆ ಹಾಗೂ ಗಣಕೀಕರಣ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಒಟ್ಟು 2,13,809 ಗಣತಿ ನಮೂನೆಗಳನ್ನು ವಿತರಿಸಲಾಗಿದ್ದು, ಆನ್‌ಲೈನ್ ಮೂಲಕ 353 ಗಣತಿ ನಮೂನೆಗಳು ಸ್ವೀಕೃತವಾಗಿವೆ ಎಂದು ತಿಳಿಸಿದರು.

ಪರಿಶೀಲನಾ ಕಾರ್ಯದಲ್ಲಿ 752 ಗೈರು ಹಾಜರಿರುವ ಮತದಾರರು, 9,163 ಶಾಶ್ವತವಾಗಿ ವಲಸೆ ಹೋಗಿರುವ ಮತದಾರರು, 10,594 ಮೃತಪಟ್ಟ ಮತದಾರರು, 2,298 ಪುನರಾವರ್ತಿತ ಮತದಾರರು ಹಾಗೂ ಇತರೆ ಕಾರಣಗಳಿಂದ 51 ಮತದಾರರನ್ನು ಗುರುತಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕ್ಷೇತ್ರದಲ್ಲಿ ಒಟ್ಟು 283 ಮತಗಟ್ಟೆಗಳಿದ್ದು, 1,200ಕ್ಕಿಂತ ಹೆಚ್ಚು ಮತದಾರರಿರುವ ಪ್ರದೇಶಗಳಲ್ಲಿ ಹೆಚ್ಚುವರಿಯಾಗಿ 9 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಮತದಾರರ ಪಟ್ಟಿಯ ಪರಿಷ್ಕರಣೆಗೆ ಅ.1 ಅರ್ಹತಾ ದಿನಾಂಕವಾಗಿದ್ದು, ಅರ್ಹ ಮತದಾರರು ತಮ್ಮ ಹೆಸರು ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದನ್ನು ಪರಿ ಶೀಲಿಸಿಕೊಳ್ಳಬೇಕು ಎಂದು ತಹಸೀಲ್ದಾರ್ ಮನವಿ ಮಾಡಿದರು.

ಹೆಸರು ಸೇರ್ಪಡೆ, ಹೆಸರು ತಿದ್ದುಪಡಿ, ಹೆಸರು ತೆಗೆದುಹಾಕುವಿಕೆ ಸೇರಿದಂತೆ ಅಗತ್ಯವಿರುವ ಹಕ್ಕು ಮತ್ತು ಆಕ್ಷೇಪಣೆಗಳನ್ನು ನಿಗದಿತ ನಮೂನೆಗಳಲ್ಲಿ ಸಲ್ಲಿಸಬಹುದಾಗಿದೆ. ಎಸ್ಐಆರ್ ಕಾರ್ಯದಲ್ಲಿ ಎಲ್ಲ ಬಿಎಲ್ಒಗಳು ಹಾಗೂ ಸಿಬ್ಬಂದಿ ಕ್ರಮಬದ್ಧವಾಗಿ ಕಾರ್ಯ ನಿರ್ವಹಿಸಿದ್ದಾರೆ ಎಂದು ಕೆ.ಸಿ.ಸೌಮ್ಯ ಅವರು ತಿಳಿಸಿದರು.

ನಗರ ಕೋಶಾಧಿಕಾರಿ ರುದ್ರಮಣಿ, ಚುನಾವಣಾ ಶಿರಸ್ತೇದಾರ್ ಕಿರಣ್ ಹಾಗೂ ಬಿ.ಎಲ್.ಒ.ಗಳು ಇದ್ದರು.

# ಸಕಲೇಶಪುರದಲ್ಲಿ ಮಳೆ ಅಬ್ಬರ : ಸಂಚಾರ ಅಸ್ತವ್ಯಸ್ತ

• ಪ್ರಜೋದಯ ವರದಿ



**ಸಕಲೇಶಪುರ:** ಕೆಲ ದಿನಗಳ ಕಾಲ ಬಿಡುವು ನೀಡಿದ್ದ ಮಳೆ ಮಲೆನಾಡು ಭಾಗದಲ್ಲಿ ಮತ್ತೆ ವೇಗ ಪಡೆದುಕೊಂಡಿದೆ. ಹೆತ್ತೂರು ಹೋಬಳಿಯ ಬಿಸಿಲೆ ಘಾಟ್ ವ್ಯಾಪ್ತಿಯಲ್ಲಿ ಸೋಮವಾರ ಸುರಿದ ಭಾರೀ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿತು.

ದಟ್ಟ ಅರಣ್ಯ ಪ್ರದೇಶದಲ್ಲಿ ಬೃಹತ್ ಮರವೊಂದು ಏಕಾಏಕಿ ರಸ್ತೆಗೆ ಉರುಳಿಬಿದ್ದ ಪರಿಣಾಮ ಕುಕ್ಕೆ ಸುಬ್ರಹ್ಮಣ್ಯ–ವನಗೂರು–ಶನಿವಾರಸಂತೆ–ಸಕಲೇಶಪುರ ಸಂಪರ್ಕಿಸುವ ಮುಖ್ಯ ರಸ್ತೆಯಲ್ಲಿ ಸುಮಾರು ಮೂರು ಗಂಟೆಗಳ ಕಾಲ ವಾಹನ ಸಂಚಾರ ಸ್ಥಗಿತಗೊಂಡು, ಎರಡೂ ಬದಿಯಲ್ಲಿ ವಾಹನಗಳು ಸಾಲುಗಟ್ಟಿ ನಿಂತವು. ಕೆಎಸ್ಆರ್‌ಟಿಸಿ ಬಸ್‌ಗಳು, ಖಾಸಗಿ ವಾಹನಗಳ ಸಂಚಾರಕ್ಕೆ ತೀವ್ರ ಅಡಚಣೆಯಾಯಿತು.

ಮರ ಬಿದ್ದಿರುವ ಬಗ್ಗೆ ಮಾಹಿತಿ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಸ್ಥಳೀಯರ ಸಹಕಾರದೊಂದಿಗೆ ಜೆಸಿಬಿ ಬಳಸಿ ರಸ್ತೆಗೆ ಅಡ್ಡಲಾಗಿ ಬಿದ್ದಿದ್ದ ಬೃಹತ್ ಮರವನ್ನು ತೆರವುಗೊಳಿಸಿದ ಬಳಿಕ ರಸ್ತೆ ಸಂಚಾರ ಪುನರಾರಂಭಗೊಂಡಿತು.

ಮಳೆಗಾಲದಲ್ಲಿ ಬಿಸಿಲೆ ಘಾಟಿಯಲ್ಲಿ ಆಗಾಗ್ಗೆ ಮರಗಳು ಉರುಳುವ ಘಟನೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ರಸ್ತೆ ಸುರಕ್ಷತೆಗಾಗಿ ಅರಣ್ಯ ಇಲಾಖೆ ಹಾಗೂ ಸಂಬಂಧಿಸಿದ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆಂದು ವಾಹನ ಸವಾರರು ಒತ್ತಾಯಿಸಿದ್ದಾರೆ. ತಾಲ್ಲೂಕು ವ್ಯಾಪ್ತಿಯಲ್ಲಿ ಭಾನುವಾರ ಸಂಜೆಯಿಂದಲೇ ಮಳೆ ಅಬ್ಬರ ಜೋರಾಗಿದೆ.

ಪಶ್ಚಿಮ ಘಟ್ಟಕ್ಕೆ ಹೊಂದಿಕೊಂಡತಿರುವ ಹೆತ್ತೂರು, ಬಿಸ್ಲೆ, ವನಗೂರು, ಹೊಂಗಡಹಳ್ಳ, ಮಾರನಹಳ್ಳಿ, ಹಾನುಬಾಳು ಭಾಗದಲ್ಲಿ ಭಾರೀ ಮಳೆಯಾಗಿದೆ. ಉಳಿದಂತೆ ಸಕಲೇಶಪುರ ಪಟ್ಟಣ, ಯಸಳೂರು, ಬೆಳಗೋಡು ಭಾಗದಲ್ಲೂ ಮಳೆಯ ಆರ್ಭಟ ಬಿರುಸಾಗಿತ್ತು.

## ರಾಜ್ಯದಲ್ಲಿ ಮತ್ತೆ 3 ದಿನ ಭಾರೀ ಮಳೆ ಮುನ್ಸೂಚನೆ

**ಬೆಂಗಳೂರು:** ರಾಜ್ಯದಲ್ಲಿ ಮುಂಗಾರು ಮಳೆ ಮತ್ತೆ ಚುರುಕುಗೊಂಡಿದ್ದು, ಮುಂದಿನ ಮೂರು ದಿನ ಹಲವು ಜಿಲ್ಲೆಗಳಲ್ಲಿ ಮಳೆ ಮುಂದುವರಿಯುವ ಸಾಧ್ಯತೆಯಿದೆ. ಕರಾವಳಿ ಮತ್ತು ಮಲೆನಾಡಿನ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆ ಹಿನ್ನೆಲೆಯಲ್ಲಿ ಕೆಲ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ, ಆ.26ರವರೆಗೆ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಹಾಗೂ ಹಾಸನ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ.

ತುಮಕೂರು ಮತ್ತು ಮಂಡ್ಯ ಜಿಲ್ಲೆಗಳ ಹಲವು ಭಾಗಗಳಲ್ಲಿ ಮಧ್ಯಮ ಮಳೆಯಾಗುವ ಸಾಧ್ಯತೆಯಿದೆ.

# ಕರಡು ಮತದಾರರ ಪಟ್ಟಿ ಹಸ್ತಾಂತರ

• ಪ್ರಜೋದಯ ವರದಿ




**ಹಾಸನ:** ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನೆಡೆದಿದ್ದು, ಇಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಇಂದಿನಿಂದ ಸೆ.23 ರವರೆಗೆ ಅವಕಾಶವಿದ್ದು, ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳಲು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ಸೋಮವಾರ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಕರಡು ಮತದಾರರ ಪಟ್ಟಿಯನ್ನು ಹಸ್ತಾಂತರಿಸಿ ಮಾತನಾಡಿದ ಅವರು, ಇಂದಿನಿಂದ ಅಕ್ಟೋಬರ್ 22ರ ವರೆಗೂ ನೋಟಿಸ್ ಅವಧಿ ಹಾಗೂ ವಿಲೇವಾರಿ ಪ್ರಕೀಯೆ ಇರುತ್ತದೆ ಎಂದು ತಿಳಿಸಿದರಲ್ಲದೆ, ಅಕ್ಟೋಬರ್ 27 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಮಾಡಲಾಗುತ್ತದೆ ಎಂದರು.

ನೋಟಿಸ್ ಪಡೆದ ಮತದಾರರು ನಿಗದಿತ ಸ್ಥಳ, ಸಮಯ, ದಿನಾಂಕದಂದು ವಿಚಾರಣೆಗೆ ಹಾಜರಾಗಿ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಅಂತಿಮ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಸೇರ್ಪಡೆಗೆ ಸಹಕರಿಸುವಂತೆ ತಿಳಿಸಿ ಎಂದು ಹೇಳಿದರು.

18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ಸಹ ಅರ್ಜಿ ನಮೂನೆ 6 ರೊಂದಿಗೆ ಅಗ್ಯತ ದಾಖಲೆಗಳನ್ನು ನೀಡಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿರುತ್ತದೆ. ಅದೇ ರೀತಿ 2026 ರ ಅ.1 ಕ್ಕೆ 18 ವರ್ಷ ತುಂಬುವವರು ಕೂಡ ಅರ್ಜಿ ನಮೂನೆ 6 ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಚುನಾವಣಾ ಶಾಖೆಯ ತಹಶೀಲ್ದಾರ್ ಹಾಗೂ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಜರಿದ್ದರು.

# ಅಚೀವರ್ಸ್ ಪ್ರಜ್ಞಾ ಪಿಯು ಕಾಲೇಜಿಗೆ ಸಮಗ್ರ ಕ್ರೀಡಾ ಪ್ರಶಸ್ತಿ




ಸಕಲೇಶಪುರ: ತಾಲ್ಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಅಚೀವರ್ಸ್ ಪ್ರಜ್ಞಾ ಪಿಯು ಕಾಲೇಜಿನ ವಿದ್ಯಾರ್ಥಿಗಳು ಸತತ ಮೂರನೇ ಬಾರಿಗೆ ಸಮಗ್ರ ಕ್ರೀಡಾ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಬಾಲಕರ ವಿಭಾಗದ ಸಮಗ್ರ ಪ್ರಶಸ್ತಿಯೊಂದಿಗೆ ಒಟ್ಟಾರೆ ಸಮಗ್ರ ಪ್ರಶಸ್ತಿಯನ್ನೂ ಕಾಲೇಜು ಪಡೆದುಕೊಂಡಿದೆ. ವಿವಿಧ ವೈಯಕ್ತಿಕ ಹಾಗೂ ತಂಡ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದು, ಬಾಲಕರ ವಿಭಾಗದಲ್ಲಿ ಕ್ರಿಸ್ಟನ್ ಡಿ ಸಿಲ್ವಾ ಹಾಗೂ ಬಾಲಕಿಯರ ವಿಭಾಗದಲ್ಲಿ ಜೇನಿಕಾ ವೈಯಕ್ತಿಕ ಚಾಂಪಿಯನ್‌ಗಳಾಗಿ ಹೊರಹೊಮ್ಮಿದ್ದಾರೆ.

ಬಾಲಕರ ವಿಭಾಗದಲ್ಲಿ 100 ಹಾಗೂ 200 ಮೀ. ಓಟದಲ್ಲಿ ಮೊಹಮ್ಮದ್ ಶಿಯಾನ್ ಪ್ರಥಮ, 800 ಮೀ. ಓಟದಲ್ಲಿ ಮನೋಜ್ ಪ್ರಥಮ, ತ್ರಿವಿಧ ಜಿಗಿತದಲ್ಲಿ ಕ್ರಿಸ್ಟನ್ ಡಿ ಸಿಲ್ವಾ ಪ್ರಥಮ ಹಾಗೂ ಡಿಸ್ಕಸ್ ಥ್ರೋನಲ್ಲಿ ಅರ್ಜುನ್ ಪ್ರಥಮ ಸ್ಥಾನ ಪಡೆದರು. ಶಟಲ್ ಬ್ಯಾಡ್ಮಿಂಟನ್ ಡಬಲ್ಸ್‌ನಲ್ಲಿ ಸುಹಾನ್ ಮತ್ತು ತುಷಾರ್ ಹಾಗೂ ಸಿಂಗಲ್ಸ್‌ನಲ್ಲಿ ದೇವೇಂದ್ರ ಪ್ರಥಮ ಸ್ಥಾನ ಗಳಿಸಿದರು. ಥ್ರೋಬಾಲ್, 4×100 ಮೀ. ರಿಲೇ, 4×400 ಮೀ. ರಿಲೇ ಮತ್ತು ಕೋ–ಕೋದಲ್ಲೂ ಬಾಲಕರ ತಂಡ ಪ್ರಥಮ ಸ್ಥಾನ ಪಡೆದುಕೊಂಡಿದೆ. ಬಾಲ್ ಬ್ಯಾಡ್ಮಿಂಟನ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿದೆ.

ಬಾಲಕಿಯರ ವಿಭಾಗದಲ್ಲಿ ವಾಲಿಬಾಲ್‌ನಲ್ಲಿ ಪ್ರಥಮ ಹಾಗೂ ಕೋ–ಕೋದಲ್ಲಿ ದ್ವಿತೀಯ ಸ್ಥಾನ ದೊರೆತಿದೆ. ಶಾಟ್‌ಪುಟ್‌ನಲ್ಲಿ ಜೇನಿಕಾ ಪ್ರಥಮ ಹಾಗೂ ವೈಷ್ಣವಿ ತೃತೀಯ, ಡಿಸ್ಕಸ್ ಥ್ರೋನಲ್ಲಿ ವೈಷ್ಣವಿ ತೃತೀಯ ಸ್ಥಾನ ಪಡೆದಿದ್ದಾರೆ. ಹ್ಯಾಮರ್ ಥ್ರೋ ಮತ್ತು ಭರ್ಜಿ ಎಸೆತದಲ್ಲಿ ಜೇನಿಕಾ ಪ್ರಥಮ ಹಾಗೂ 400 ಮೀ. ಓಟದಲ್ಲಿ ಸಂಚಿತ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ಸಂಸ್ಥೆಯ ಮುಖ್ಯಸ್ಥ ಸಂದೇಶ್ ಅವರು ಮಾತನಾಡಿ, ಅಚೀವರ್ಸ್ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ಹಲವು ವರ್ಷಗಳಿಂದ ವಾಣಿಜ್ಯ ಹಾಗೂ ವಿಜ್ಞಾನ ವಿಭಾಗದ ಪರೀಕ್ಷೆಗಳಲ್ಲಿ ತಾಲೂಕು ಮಟ್ಟದಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಇದೀಗ ಸತತ ಮೂರನೇ ಬಾರಿಗೆ ತಾಲ್ಲೂಕು ಮಟ್ಟದ ಸಮಗ್ರ ಕ್ರೀಡಾ ಪ್ರಶಸ್ತಿ ಪಡೆಯುವ ಮೂಲಕ ಕ್ರೀಡಾ ಕ್ಷೇತ್ರದಲ್ಲಿಯೂ ನಿರಂತರ ಯಶಸ್ಸು ಸಾಧಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಶಿಕ್ಷಣದ ಜತೆಗೆ ಕ್ರೀಡೆಗೂ ಉತ್ತೇಜನ ನೀಡುವ ಮೂಲಕ ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಸಂಸ್ಥೆ ಶ್ರಮಿಸುತ್ತಿದೆ ಎಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ. ವಿದ್ಯಾರ್ಥಿಗಳ ಪರಿಶ್ರಮ, ತರಬೇತುದಾರರ ಮಾರ್ಗದರ್ಶನ ಹಾಗೂ ಸಂಸ್ಥೆಯ ಪ್ರೋತ್ಸಾಹದಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ಆಡಳಿತ ಮಂಡಳಿ ತಿಳಿಸಿದೆ.

24 ಎಸ್ಕೆಪಿ 2 ಪಟ್ಟಣದ ಅಚೀವರ್ಸ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಸತತ ಮೂರನೇ ಬಾರಿ ಸಮಗ್ರ ಪ್ರಶಸ್ತಿ ಪಡೆದುಕೊಂಡರು.

# ದೃಷ್ಟಿ ದೋಷವುಳ್ಳವರಿಗೆ ಕನ್ನಡಕ ವಿತರಣೆ

• ಪ್ರಜೋದಯ ವರದಿ




**ಆಲೂರು:** ಮನುಷ್ಯನ ಕಣ್ಣು ತಮ್ಮ ಬದುಕಿನ ಬೆಳಕನ್ನು ನೀಡುತ್ತದೆ. ಕಣ್ಣಿನ ಸುರಕ್ಷತೆ ಬಹಳ ಮುಖ್ಯ ಎಂದು ತಾಲೂಕು ರೆಡ್‌ಕ್ರಾಸ್ ಸಭಾಪತಿ ಕೆ.ಎನ್ ಕಾಂತರಾಜು ತಿಳಿಸಿದರು.

ತಾಲ್ಲೂಕಿನಮಗ್ಗೆ ಗ್ರಾಮದಲ್ಲಿ ಭಾರತೀಯ ರೆಡ್‌ಕ್ರಾಸ್ ಘಟಕ ಆಲೂರು, ಲಯನ್ಸ್ ಸೇವಾ ಸಂಸ್ಥೆ ಮಗ್ಗೆ–ರಾಯರ ಕೊಪ್ಪಲು ಘಟಕ ಹಾಗೂ ಎ.ಎಸ್.ಜಿ. ಕಣ್ಣಿನ ಆಸ್ಪತ್ರೆ ಮೈಸೂರು ಇವರ ಸಂಯುಕ್ತ ಆಶ್ರಯದಲ್ಲಿ, ಪರೀಕ್ಷೆಗೆ ಒಳಗಾಗಿದ್ದ ದೃಷ್ಟಿ ದೋಷವುಳ್ಳವರಿಗೆ ಕನ್ನಡಕಗಳನ್ನು ವಿತರಿಸಿ ಮಾತನಾಡಿದ ಅವರು, ಕಳೆದ 15 ದಿನಗಳ ಹಿಂದೆ ಮಗ್ಗೆ ಗ್ರಾಮದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ, ದೂರ ಮತ್ತು ಸಮೀಪ ದೃಷ್ಟಿ ದೋಷವುಳ್ಳ 150 ಜನರನ್ನು ಗುರುತಿಸಲಾಗಿತ್ತು. ಈಗ ಅವರಿಗೆ ಕನ್ನಡಗಳನ್ನು ವಿತರಿಸಲಾಗುತ್ತಿದೆ ಎಂದರು.

ಉಚಿತ ಕಣ್ಣಿನ ತಪಾಸಣೆಯ ಶಿಬಿರದಲ್ಲಿ 300ಕ್ಕೂ ಹೆಚ್ಚಿನ ಸಾರ್ವಜನಿಕರು ತಮ್ಮ ಕಣ್ಣುಗಳನ್ನು ತಪಾಸಣೆಗೆ ಒಳಪಡಿಸಿಕೊಂಡಿದ್ದರು. ಅದರಲ್ಲಿ ಸಮೀಪ ದೃಷ್ಟಿ ದೋಷವುಳ್ಳ 150ಕ್ಕೂ ಹೆಚ್ಚು ಜನರಿಗೆ ಸ್ಥಳದಲ್ಲಿಯೇ ಉಚಿತ ಕನ್ನಡಕಗಳನ್ನು ವಿತರಿಸಲಾಗಿತ್ತು ಎಂದರು.

ಎ.ಎಸ್.ಜಿ. ಕಣ್ಣಿನ ಆಸ್ಪತ್ರೆ ಸೀನಿಯರ್ ಸೇಲ್ಸ್ ಎಕ್ಸಿಕ್ಯೂಟಿವ್ ಮುಷವಿರ್ ಪಾಷ ಅವರು ಮಾತನಾಡಿ, ಕೆಲವರು ಕಣ್ಣಿನ ಸಣ್ಣಪುಟ್ಟ ಸಮಸ್ಯೆಗಳನ್ನು ನಿರ್ಲಕ್ಷಿಸಿ ದೊಡ್ಡ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಲು ಪೌಷ್ಟಿಕ ಆಹಾರ ವಿಟಮಿನ್ 'ಎ' ಇರುವ ತರಕಾರಿಗಳು, ಕ್ಯಾರೆಟ್, ಸೊಪ್ಪು ಇತ್ಯಾದಿಗಳನ್ನು ಸೇವನೆ ಮಾಡಬೇಕು. ಕಣ್ಣಿಗೆ ಯಾವುದೇ ತೊಂದರೆ ಕಂಡುಬಂದ ಕೂಡಲೇ ನಿರ್ಲಕ್ಷ್ಯ ಮಾಡದೆ ವೈದ್ಯರನ್ನು ಸಂಪರ್ಕಿಸಬೇಕು. ನಮ್ಮ ಸಾವಿನ ನಂತರವೂ ನೇತ್ರದಾನದ ಮೂಲಕ ಮತ್ತೊಬ್ಬರ ಜೀವನಕ್ಕೆ ಬೆಳಕಾಗುವ ಸತ್ಕಾರ್ಯದಲ್ಲಿ ನಾವು ಭಾಗಿಯಾಗುವ ಅವಕಾಶವಿದೆ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ರೆಡ್‌ಕ್ರಾಸ್ ಸಭಾಪತಿ ಕೆ.ಎನ್.ಕಾಂತರಾಜು, ಕಾರ್ಯದರ್ಶಿ ವೀರಭದ್ರಸ್ವಾಮಿ, ಉಪ ಸಭಾಪತಿ ಶಶಿಧರ್ ಬೆಕ್ಕಡಿ, ಪದಾಧಿಕಾರಿಗಳಾದ ಅಜರುದ್ದೀನ್, ಪ್ರವೀಣ್, ಧರ್ಮರಾಜು ಭರತ್ತೂರು ಲಯನ್ಸ್ ಸೇವಾ ಸಂಸ್ಥೆಯ ಅಧ್ಯಕ್ಷ ಸುನಿಲ್ ಗಾಣಿಗೆರೆ, ವಲಯ ಅಧ್ಯಕ್ಷ ರಘು ಪಾಳ್ಯ, ರವಿ ಮಾದಿಹಳ್ಳಿ, ರವಿ ನೀಡುಗರಹಳ್ಳಿ, ಚನ್ನಕೇಶವ, ರಾಜಕುಮಾರ್, ಎಚ್.ಎನ್.ರಮೇಶ್, ಡಾ.ವಿಮಲಾ, ಶ್ರೀಧರ್, ಪಾಟೀಲ್ ಉಪಸ್ಥಿತರಿದ್ದರು.

## ಇಂದು ಕುರುಕ್ಷೇತ್ರ ಪ್ರದರ್ಶನ

**ಹಾಸನ:** ಸಾಲಗಾಮೆ ಹೋಬಳಿ ಕಡಗ ಗ್ರಾಮ ಶ್ರೀ ಶ್ರೀನಿವಾಸ ರಂಗಭೂಮಿ ಮತ್ತು ಸಾಂಸ್ಕೃತಿಕ ಸಂಘ ಮತ್ತು ಕನ್ನಡ ಸಂಸ್ಕೃತಿ ಇಲಾಖೆ, ಹಾಸನ ಇವರ ಸಹಕಾರದೊಂದಿಗೆ ಶ್ರೀನಿವಾಸ ಡ್ರಾಮಾ ಸೀನರಿ, ಲಕ್ಷ್ಮಣ್ ಮತ್ತು ಮಕ್ಕಳು ಇವರ ರಂಗಸಜ್ಜಿಕೆಯಲ್ಲಿ ಆ.25 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಹಾರ್ಮೋನಿಯಂ ಮಾಸ್ಟರ್ ಡಿ.ಸಿ.ಪುಟ್ಟರಾಜು ಅವರ ನಿರ್ದೇಶನದಲ್ಲಿ ಕುರುಕ್ಷೇತ್ರ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ.

## ಶತಾಯುಷಿ ಗಿಡ್ಡಮ್ಮ ನಿಧನ



ಅರಕಲಗೂಡು: ತಾಲ್ಲೂಕಿನ ಮರಡಿ ಗ್ರಾಮದ ಶತಾಯುಷಿ ಗಿಡ್ಡಮ್ಮ ಸೋಮವಾರ ನಿಧನರಾಗಿದ್ದಾರೆ.

ದಿ|| ಗೋಂವಿಂದೇ ಗೌಡ ಎಂಬುವವರ ಪತ್ನಿ ಗಿಡ್ಡಮ್ಮ ಅವರಿಗೆ ನಿವೃತ್ತ ಇಂಜಿನೀಯರ್ ಎಂ.ಜಿ.ಸೋಮಶೇಖರ್ ಸೇರಿ ಮೂವರು ಪುತ್ರರು, ಒಬ್ಬ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಮಂಗಳವಾರ ಸ್ವಗ್ರಾಮದ ತೋಟದ ಜಮೀನಿನಲ್ಲಿ ಮೃತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೀಸಲಾತಿ ಪಟ್ಟಿಯಲ್ಲಿ ವ್ಯತ್ಯಾಸ: ಹೆಚ್.ಕೆ.ಕೆ.

• ಪ್ರಜೋದಯ ವರದಿ



**ಸಕಲೇಶಪುರ:** ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆಸುವ ಉದ್ದೇಶದಿಂದ ಪ್ರಕಟಿಸಿರುವ ಮೀಸಲಾತಿ ಪಟ್ಟಿಯು ಸರ್ಕಾರ ಹಾಗೂ ಚುನಾವಣಾ ಆಯೋಗದ ಮಾರ್ಗಸೂಚಿಗಳಿಗೆ ಅನುಗುಣವಾಗಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ ಎಂದು ಮಾಜಿ ಸಚಿವ ಎಚ್.ಕೆ. ಕುಮಾರಸ್ವಾಮಿ ಅವರು ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಕಲೇಶಪುರ ತಾಲ್ಲೂಕಿನಲ್ಲಿ 26 ಗ್ರಾಮ ಪಂಚಾಯಿತಿಗಳಿದ್ದು, ಮೀಸಲಾತಿ ನಿಗದಿಪಡಿಸುವಾಗ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ವರ್ಗಗಳಿಗೆ ನಿಗದಿತ ಪ್ರಮಾಣದಲ್ಲಿ ಮೀಸಲಾತಿ ಕಲ್ಪಿಸುವ ಜತೆಗೆ ಮಹಿಳೆಯರಿಗೂ ಮೀಸಲಾತಿ ನೀಡಬೇಕು. ಆದರೆ ಪ್ರಕಟಿಸಿರುವ ಪಟ್ಟಿಯಲ್ಲಿ ಹಲವು ವ್ಯತ್ಯಾಸಗಳು ಕಂಡುಬರುತ್ತಿವೆ ಎಂದರು.

ವಿಶೇಷವಾಗಿ ಹಿಂದುಳಿದ ವರ್ಗಗಳ ಎ ಗುಂಪಿಗೆ ಸೇರಿದ ಬಿಲ್ಲವ, ಮುಸ್ಲಿಂ, ಆಚಾರ್ಯ, ದೇವಾಂಗ ಸೇರಿದಂತೆ ವಿವಿಧ ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಹಲವು ಗ್ರಾಮ ಪಂಚಾಯಿತಿಗಳಿಗೆ ಎ ವರ್ಗದ ಮೀಸಲಾತಿ ನೀಡಲಾಗಿಲ್ಲ. ಸಕಲೇಶಪುರ ತಾಲ್ಲೂಕಿನ 26 ಗ್ರಾಮ ಪಂಚಾಯಿತಿಗಳ ಪೈಕಿ 16 ಪಂಚಾಯಿತಿಗಳಲ್ಲಿ ಎ ವರ್ಗಕ್ಕೆ ಮೀಸಲಾತಿ ಕಲ್ಪಿಸದಿರುವುದು ಗಮನಕ್ಕೆ ಬಂದಿದೆ ಎಂದು ಹೇಳಿದರು.

ಬೆಳಗೋಡು, ದೇಪಲ, ಆನೆ ಮಹಲ್, ಕುರಿಗನಹಳ್ಳಿ, ಮಹಾನಬಲ್, ಭಾಗ್ಯಮ್ಮ ಹಾಗೂ ಬಾಳ್ಳುಪೇಟೆ ಸೇರಿದಂತೆ ವಿವಿಧ ಭಾಗಗಳಲ್ಲಿ ನಿರ್ದಿಷ್ಟ ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಅವರಿಗೆ ಸೂಕ್ತ ಮೀಸಲಾತಿ ದೊರೆತಿಲ್ಲ. ಪರಿಶಿಷ್ಟ ಜಾತಿ ಸೇರಿದಂತೆ ವಿವಿಧ ವರ್ಗಗಳಲ್ಲಿಯೂ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನಿಗದಿಯಾಗಿಲ್ಲ ಎಂಬ ದೂರುಗಳಿವೆ ಎಂದು ತಿಳಿಸಿದರು.

ಮೀಸಲಾತಿ ನಿಗದಿಪಡಿಸುವಾಗ ಜಿಲ್ಲಾಧಿಕಾರಿ, ತಹಶೀಲ್ದಾರ್ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರ ಮತ್ತು ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಮಾರ್ಗಸೂಚಿಗಳನ್ನು ಮೀರಿ ಮೀಸಲಾತಿ ನಿಗದಿಪಡಿಸಿರುವುದು ಏಕೆ ಎಂಬುದನ್ನು ಜಿಲ್ಲಾಡಳಿತ ಸ್ಪಷ್ಟಪಡಿಸಬೇಕು. ಇದರಲ್ಲಿ ರಾಜಕೀಯ ಪ್ರೇರಣೆ ಇದೆಯೇ ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡಿದೆ ಎಂದು ಆರೋಪಿಸಿದರು.

ಮೀಸಲಾತಿ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಲಾಗಿದೆ. ಹೀಗಾಗಿ ಯಾವುದೇ ಗ್ರಾಮ ಪಂಚಾಯಿತಿ ಅಥವಾ ವಾರ್ಡ್‌ನಲ್ಲಿ ಅನ್ಯಾಯವಾಗಿದೆ ಎಂದು ಭಾವಿಸುವ ಮತದಾರರು ನಿಗದಿತ ಅವಧಿಯೊಳಗೆ ತಕರಾರು ಸಲ್ಲಿಸಿ ತಮ್ಮ ಹಕ್ಕನ್ನು ಕೇಳಬೇಕು. ಈ ವಿಚಾರವನ್ನು ತಮ್ಮ ಪರವಾಗಿ ಜಿಲ್ಲಾಧಿಕಾರಿಗಳ ಗಮನಕ್ಕೂ ತರುವುದಾಗಿಯೂ ಕುಮಾರಸ್ವಾಮಿ ಹೇಳಿದರು.

# ಪುಸ್ತಕ ಮಾತನಾಡುವುದಿಲ್ಲ, ಮಾರ್ಗದರ್ಶನ ಮಾಡುತ್ತವೆ

• ಪ್ರಜೋದಯ ವರದಿ



**ಹಾಸನ:** ಪುಸ್ತಕ ಮೌನ ಶಿಕ್ಷಕ ಮಾತನಾಡುವುದಿಲ್ಲ, ಅಂತಃಕರಣವನ್ನು ಸೃಷ್ಟಿಸುತ್ತವೆ. ನಡೆಯುವುದಿಲ್ಲ, ಮಾರ್ಗದರ್ಶನ ಮಾಡುತ್ತವೆ. ನೋಡುವುದಿಲ್ಲ ಜಗತ್ತನ್ನು ತೋರಿಸುತ್ತವೆ ಎಂದು ಹಾಸನ ಹೇಮಗಂಗೋತ್ರಿ ವಿ.ವಿ. ಕುಲ ಸಚಿವ (ಮೌಲ್ಯ ಮಾಪನ) ಡಾ.ಎನ್.ನಾಗರಾಜು ತಿಳಿಸಿದರು.

ನಗರದ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಕಾಲೇಜು ಶಿಕ್ಷಣ ಇಲಾಖೆ, ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಾಗರೀಕರ ಹಕ್ಕುಗಳ ಸಂರಕ್ಷಣಾ ವೇದಿಕೆ, ಹಾಸನ ಹಾಗೂ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು ಇವರ ಸಂಯುಕ್ತಶ್ರಾಯದಲ್ಲಿ ಆ.20ರಂದು ನಡೆದ ರಾಜಣ್ಣ ರಾಶಿ ಅವರ 1857 ಸ್ವಾತಂತ್ರ್ಯ ಸಂಗ್ರಾಮದಿಂದುದಯಿಸಿದ ಭಾರತ ಪುಸ್ತಕ ಬಿಡುಗಡೆ ಮತ್ತು ವಿಮರ್ಶೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕೃತಿ ಬಿಡುಗಡೆ ಮಾಡಿದ ಲೇಖಕ ಗೊರೂರು ಶಿವೇಶ್ ಮಾತನಾಡಿ, ಇತಿಹಾಸ ಮತ್ತು ಸಾಹಿತ್ಯ ಕಾಲಯಾನದ ಎರಡು ಕಣ್ಣುಗಳಾಗಿವೆ. ಇತಿಹಾಸದ ಜೊತೆ ಜೊತೆಗೆ ಆ ಕಾಲಘಟ್ಟದ ಜನಸಾಮಾನ್ಯರ ಮತ್ತು ಸೈನಿಕರ ವೃತ್ತಾಂತಗಳನ್ನು ಚಿತ್ರಸಿರುವ ಲೇಖಕರ ಕೃತಿಗಳನ್ನು ಓದಿದಾಗ ಒಂದು ಸಮಗ್ರ ಅನುಭವ ದೊರಕುತ್ತದೆ ಎಂದು ವಿವರಿಸಿದರು.

ಕೃತಿ ಕುರಿತು ಮಾತನಾಡಿದ ಡಾ. ಬರಾಳು ಶಿವರಾಮ್ ಅವರು, 32 ವಿಮರ್ಶಾ ಗ್ರಂಥಗಳನ್ನು ಅಧ್ಯಯನ ಮಾಡಿ ಘಟನೆ ನಡೆದ ಸ್ಥಳಗಳನ್ನು ಸಂದರ್ಶಿಸಿ ಕೃತಿಯನ್ನು ರಚಿಸಿರುವುದರಿಂದ ಕೃತಿಯು ಅನನ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಸಾಹಿತಿ ಗೊರೂರು ಅನಂತರಾಜು ಮಾತನಾಡಿ, ವೃತ್ತಿಯಲ್ಲಿ ಇಂಜಿನಿಯರ್ ಆಗಿರುವ ರಾಜಣ್ಣ ರಾಶಿ ತಮ್ಮ ವೃತ್ತಿ ಜಗತ್ತಿನಲ್ಲಿ ಅಣೆಕಟ್ಟುಗಳು ಬ್ಯಾರೇಜುಗಳು ಫ್ಲೈ ಓವರ್‌ಗಳನ್ನು ದಕ್ಷತೆಯಿಂದ ನಿರ್ಮಿಸಿ, ನಿವೃತ್ತಿಯ ನಂತರ ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ರಚಿಸಿರುವ ಈ ಕೃತಿ ಕನ್ನಡ ಸಾಹಿತ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆ ಆಗಿದೆ ಎಂದರು.

ಪ್ರಾಂಶುಪಾಲ ಪ್ರೊ.ಮಂಜಯ್ಯ ಮಾತನಾಡಿ, ಇತಿಹಾಸ ಅರಿಯದವನು ಇತಿಹಾಸ ನಿರ್ಮಿಸಲಾರರು. ಪುಸ್ತಕ ಭಂಡಾರದ ಮೂಲಕ ಅಪಾರ ಜ್ಞಾನವನ್ನು ಗಳಿಸಿ ಸರ್ವರಿಗೂ ಸಮಬಾಳು ಸಮಪಾಲು ಧ್ಯೇಯದಡಿಯಲ್ಲಿ ರೂಪಿಸಿದ ಭಾರತದ ಸಂವಿಧಾನ ಪ್ರಧಾನವಾಗಿದೆ. ಸಾಹಿತಿಗಳು, ಸಂಪನ್ಮೂಲ ವ್ಯಕ್ತಿಗಳ ಮಾತು, ಉಪನ್ಯಾಸ ವಿದ್ಯಾರ್ಥಿನಿಯರ ಜ್ಞಾನರ್ಜನೆಗೆ ಉಪಯುಕ್ತ ಮಾಹಿತಿ ಒದಗಿಸಿದೆ. ನಾವು ಓದುವಾಗ ಇಷ್ಟೆಲ್ಲಾ ಅವಕಾಶ ದೊರಕಿರಲಿಲ್ಲ. ನೀವು ವಿದ್ಯಾರ್ಥಿನಿಯರು ಅದೃಷ್ಟವಂತರು. ನೀವೂ ಕೂಡ ಓದು ಅಧ್ಯಯನದಿಂದ ವೇದಿಕೆಯಲ್ಲಿ ಕುಳಿತ ಸಾಧಕರಂತೆ ಈ ಸ್ಥಾನಕ್ಕೆ ಬರಬಹುದು ಎಂದು ಕಿವಿಮಾತು ಹೇಳಿದರು.

ನಾಗರಿಕ ಹಕ್ಕುಗಳ ಸಂರಕ್ಷಣಾ ವೇದಿಕೆಯ ಅಧ್ಯಕ್ಷೆ ಸತ್ಯವತಿ ಮತ್ತು ಕೃತಿಯ ಲೇಖಕ ರಾಜಣ್ಣ ರಾಶಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ತಹಶೀಲ್ದಾರ್ ಎ.ವಿ.ರುದ್ರಪ್ಪಾಜಿರಾವ್, ಕಾಲೇಜಿನ ಉಪನ್ಯಾಸಕರು, ನಾಗರಿಕ ಹಕ್ಕುಗಳ ಸಂರಕ್ಷಣಾ ವೇದಿಕೆಯ ಸದಸ್ಯರು, ಗಾಯಕ ಶ್ರೀಕಾಂತ್, ಸಾಂಸ್ಕೃತಿಕ ವಿಭಾಗದ ಸಂಚಾಲಕ ಜಿ.ಆರ್.ಮೋಹನ್‌ಕುಮಾರ್, ನಾಗರಿಕ ಹಕ್ಕುಗಳ ಆರ್.ಸುಧಾಕರ, ಶಶಿಕಲಾ ಜಗದೀಶ್ ಹಾಜರಿದ್ದರು.

## ಹೆಸರು, ವಿಳಾಸ, ಪಟ್ಟಿಯಲ್ಲಿರುವ ಇತರ ವಿವರ ಪರಿಶೀಲಿಸಿಕೊಳ್ಳಿ

# ಮತದಾರರ ಪಟ್ಟಿ ಪ್ರಕಟ: ಆಕ್ಷೇಪಣೆಗೆ ಸೆ.23 ರವರೆಗೆ ಅವಕಾಶ

• ಪ್ರಜೋದಯ ವರದಿ



**ಬೇಲೂರು:** ಬೇಲೂರು ವಿಧಾನಸಭಾ ಕ್ಷೇತ್ರದ ಕರಡು ಮತದಾರರ ಪಟ್ಟಿಯನ್ನು ಸೋಮವಾರ ಪ್ರಕಟಿಸಲಾಗಿದ್ದು, ಪಟ್ಟಿಯಲ್ಲಿರುವ ಹೆಸರು, ವಿಳಾಸ ಹಾಗೂ ಇತರ ವಿವರಗಳನ್ನು ಪರಿಶೀಲಿಸಿ ಆಕ್ಷೇಪಣೆ ಮತ್ತು ತಿದ್ದುಪಡಿಗಳನ್ನು ಸಲ್ಲಿಸಲು ಸೆ.23ರ ವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು 195– ಬೇಲೂರು ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿ ರಜನಿಕಾಂತ್ ಅವರು ಮಾಹಿತಿ ನೀಡಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಮತದಾರರ ಪಟ್ಟಿ ಪ್ರಕಟಣೆ ಕುರಿತ ಸಭೆಯಲ್ಲಿ ಮಾತನಾಡಿದ ಅವರು, ಆ.24ರಂದು ಕ್ಷೇತ್ರದ 276 ಮತಗಟ್ಟೆ ಕೇಂದ್ರಗಳು ಹಾಗೂ ತಾಲ್ಲೂಕು ಕಚೇರಿಯಲ್ಲಿ ಕರಡು ಮತದಾರರ ಪಟ್ಟಿಯನ್ನು ಸಾರ್ವಜನಿಕರ ವೀಕ್ಷಣೆಗೆ ಪ್ರಕಟಿಸಲಾಗಿದೆ. ಮತದಾರರು ತಮ್ಮ ಹೆಸರು, ವಿಳಾಸ ಹಾಗೂ ಪಟ್ಟಿಯಲ್ಲಿರುವ ಇತರ ವಿವರಗಳನ್ನು ಪರಿಶೀಲಿಸಿಕೊಳ್ಳಬೇಕು ಎಂದು ಹೇಳಿದರು.

ಕರಡು ಪಟ್ಟಿ ಪ್ರಕಟವಾದ ಬಳಿಕ ಅರ್ಹ ಮತದಾರರು ಹೆಸರು ಸೇರ್ಪಡೆ, ಹೆಸರು ಅಥವಾ ನಮೂದಿನ ಕುರಿತು ಆಕ್ಷೇಪಣೆ, ವಿವರಗಳ ತಿದ್ದುಪಡಿ ಹಾಗೂ ವಿಳಾಸ ಬದಲಾವಣೆಗೆ ಸಂಬಂಧಿಸಿದ ಹಕ್ಕು ಆಕ್ಷೇಪಣೆಗಳನ್ನು ಆ.24ರಿಂದ ಸೆ.23 ರ ವರೆಗೆ ಸಲ್ಲಿಸಬಹುದು.

ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗಾಗಿ ನಮೂನೆ– 6, ಹೆಸರು ಅಥವಾ ನಮೂದು ಕುರಿತು ಆಕ್ಷೇಪಣೆ ಹಾಗೂ ಹೆಸರು ಅಳಿಸುವ ಕುರಿತು ಆಕ್ಷೇಪಣೆಗಾಗಿ ನಮೂನೆ –7, ವಿವರಗಳ ತಿದ್ದುಪಡಿ ಮತ್ತು ವಿಳಾಸ ಬದಲಾವಣೆಗೆ ನಮೂನೆ– 8ರಲ್ಲಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಅಗತ್ಯವಿದ್ದಲ್ಲಿ ಸಂಬಂಧಪಟ್ಟವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿ, ಚುನಾವಣಾ ಆಯೋಗದ ನಿಯಮ ಹಾಗೂ ಮಾರ್ಗಸೂಚಿಗಳಂತೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಬೇಲೂರು ತಹಸೀಲ್ದಾರ್ ಹಾಗೂ ಮತದಾರರ ನೋಂದಣಿ ಸಹಾಯಕ ಅಧಿಕಾರಿ ಶ್ರೀಧರ್ ಕಂಕಣವಾಡಿ ಮಾತನಾಡಿ, ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಕ್ಷೇತ್ರದಲ್ಲಿದ್ದ ಸುಮಾರು ಎರಡು ಲಕ್ಷ ಮತದಾರರ ಪೈಕಿ 19,038 ಹೆಸರುಗಳನ್ನು ಕೈಬಿಡಲಾಗಿದೆ. ಮೃತಪಟ್ಟವರು, ಎರಡು ಕಡೆ ಮತದಾರರಾಗಿ ನೋಂದಣಿಯಾಗಿದ್ದವರು ಸೇರಿದಂತೆ ವಿವಿಧ ಕಾರಣಗಳಿಂದ ಹೆಸರುಗಳನ್ನು ತೆಗೆದು ಹಾಕಲಾಗಿದೆ ಎಂದು ಹೇಳಿದರು.

ಬಿಎಲ್ಒಗಳು ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಲಭ್ಯವಾಗದವರು ಹಾಗೂ ವಿವಿಧ ಕಾರಣಗಳಿಂದ ಹೆಸರು ಪಟ್ಟಿಯಿಂದ ನಾಪತ್ತೆಯಾಗಿರುವವರು ಕೂಡ ನಿಗದಿತ ಅವಧಿಯಲ್ಲಿ ಅರ್ಜಿ ಸಲ್ಲಿಸಿ ತಮ್ಮ ವಿವರಗಳನ್ನು ಪರಿಶೀಲಿಸಿಕೊಳ್ಳಬಹುದು ಎಂದು ರಜನಿಕಾಂತ್ ಅವರು ತಿಳಿಸಿದರು.

ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಪ್ರಸ್ತುತ 1,85,694 ಮತದಾರರು ಇದ್ದು, ಇವರಲ್ಲಿ 92,454 ಪುರುಷರು ಹಾಗೂ 93,240 ಮಹಿಳೆಯರು ಇದ್ದಾರೆ. ಕ್ಷೇತ್ರದಲ್ಲಿ 3,265 ಅಂಗವಿಕಲ ಮತದಾರರು, 1,349 ಯುವ ಮತದಾರರು ಹಾಗೂ 1,835 ಹಿರಿಯ ನಾಗರಿಕ ಮತದಾರರು ಇದ್ದಾರೆ ಎಂದು ಅವರು ಸಮಗ್ರ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ಬಸವರಾಜು ಟಾಕಪ್ಪ ಶಿಗ್ಗಾವಿ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಲಿಂಗರಾಜ್, ಹಿಂದುಳಿದ ವರ್ಗಗಳ ಅಧಿಕಾರಿ ಮುದುಕಪ್ಪ ಹಾಗೂ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಉಪಸ್ಥಿತರಿದ್ದರು.

## ಆ.27 ರಂದು ವಿಶೇಷ ಅರಿವು

**ಹಾಸನ:** ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ, ಹಾಸನ ಹಾಗೂ ರ್ಕಾರಿ ಮಹಿಳಾ ಪ್ರಥಮ ರ್ಜೆ ಕಾಲೇಜು, ಯುವ ರೆಡ್ ಕ್ರಾಸ್ ಘಟಕ ಮತ್ತು ಅರ್ಥಶಾಸ್ತ್ರ ವಿಭಾಗದ ಸಂಯುಕ್ತಾಶ್ರಯದಲ್ಲಿ ಆ.27 ರಂದು ಬೆಳಿಗ್ಗೆ 11 ಗಂಟೆಗೆ ಕಾಲೇಜಿನ ಆವರಣದಲ್ಲಿ ವಿಶ್ವ ಜನಸಂಖ್ಯಾ ದಿನಾಚರಣೆ ಅಂಗವಾಗಿ "ವಿಶೇಷ ಅರಿವು ಹಾಗೂ ಅಧ್ಯಾತ್ಮಿಕ ಚಿಂತನಾ ಸಭೆ" ಕಾರ್ಯಕ್ರಮ ಆಯೋಜಿಸಲಾಗಿದೆ.

ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಡಾ. ನಿಶ್ಚಲಾನಂದನಾಥ ಮಹಾಸ್ವಾಮೀಜಿ, ಅವರು ಆಶೀರ್ವಚನ ಹಾಗೂ ಬೋಧನಾ ಮಾತುಗಳನ್ನು ನೀಡಲಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಪ್ರಾಂಶುಪಾಲ ಪ್ರೊ.ಬಾಲಕೃಷ್ಣ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಜನಸಂಖ್ಯೆ, ಆರೋಗ್ಯ, ಶಿಕ್ಷಣ, ಪರಿಸರ ಸಂರಕ್ಷಣೆ ಹಾಗೂ ಸಾಮಾಜಿಕ ಜವಾಬ್ದಾರಿಯ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು ಪ್ರಮುಖ ಉದ್ದೇಶವಾಗಿದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ರೆಡ್‌ಕ್ರಾಸ್ ಸಂಸ್ಥೆ ಕಾರ್ಯದರ್ಶಿ ಶಬ್ಬೀರ್ ಅಹಮದ್ ಕೋರಿದ್ದಾರೆ.

# ರಾಜ್ಯದಲ್ಲಿ 1.7 ಕೋಟಿ ಮತದಾರರು ಡಿಲೀಟ್

## ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಮಾಹಿತಿ | ಸೆ.23ರವರೆಗೆ ಆಕ್ಷೇಪಣೆಗೆ ಅವಕಾಶ

• ಪ್ರಜೋದಯ ವರದಿ

**ಬೆಂಗಳೂರು:** ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಮುಕ್ತಾಯಗೊಂಡಿದ್ದು ರಾಜ್ಯದಲ್ಲಿ ಬರೋಬ್ಬರಿ 1,07,96,339 ಮತದಾರರ ಹೆಸರು ಡಿಲೀಟ್ ಆಗಿದೆ.

ಸೋಮವಾರ ಸುದ್ದಿಗೋಷ್ಠಿ ನಡೆಸಿದ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಅವರು ಮಾತನಾಡಿ, ರಾಜ್ಯದಲ್ಲಿ 1 ಕೋಟಿ, 7 ಲಕ್ಷ ಮತದಾರರ ಹೆಸರು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ. 5,54,32,314 ಮತದಾರರ ಹೆಸರು ಉಳಿದುಕೊಂಡಿದೆ. ಫಾರ್ಮ್ 6 ಬಳಸಿಕೊಂಡು ಮತದಾರರ ಪಟ್ಟಿಗೆ ಸೇರಬಹುದೆಂದು ಹೇಳಿದರು.

ರಾಜ್ಯದಲ್ಲಿ ಒಟ್ಟು 5 ಕೋಟಿ 54 ಲಕ್ಷ 32 ಸಾವಿರದ 314 ಮತದಾರರಿದ್ದರು. ಇದರಲ್ಲಿ ಎಸ್‌ಐಆರ್ ನಂತರ 4 ಕೋಟಿ 46 ಲಕ್ಷ 80 ಸಾವಿರದ 151 ಮತದಾರರು ಉಳಿದಿದ್ದಾರೆ. ಒಟ್ಟು 4 ಕೋಟಿ 46 ಲಕ್ಷ 35 ಸಾವಿರದ 975 ಮಂದಿಯ ಮಾಹಿತಿಯನ್ನು ಡಿಜಿಟಲೀಕರಣಗೊಳಿಸಲಾಗಿದ್ದು, ಇದು ಶೇ.80.52ರಷ್ಟು ಡಿಜಿಟಲೀಕರಣವಾಗಿದೆ. ಕರಡು ಪಟ್ಟಿಯಲ್ಲಿ 2 ಕೋಟಿ 22 ಲಕ್ಷದ 1 ಸಾವಿರದ 727 ಪುರುಷ ಮತದಾರರು, 2 ಕೋಟಿ 24 ಲಕ್ಷದ 75 ಸಾವಿರದ 553 ಮಹಿಳಾ ಮತದಾರರು ಹಾಗೂ 2,871 ತೃತೀಯ ಲಿಂಗಿ ಮತದಾರರು ಇದ್ದಾರೆಂದು ವಿವರಿಸಿದರು.

ಗಣತಿ ನಮೂನೆ ಸಲ್ಲಿಸದ 1 ಕೋಟಿ 7 ಲಕ್ಷ 96 ಸಾವಿರದ 339 ಮತದಾರರನ್ನು ಎಎಸ್‌ಡಿಡಿಒ ಪಟ್ಟಿಗೆ ಸೇರಿಸಲಾಗಿದೆ. ಅವರಲ್ಲಿ 65 ಲಕ್ಷ 45 ಸಾವಿರದ 679 ಜನರು ಶಾಶ್ವತವಾಗಿ ಸ್ಥಳಾಂತರಗೊಂಡಿದ್ದಾರೆ. 16 ಲಕ್ಷ 39 ಸಾವಿರದ 864 ಜನರು ಮೃತಪಟ್ಟಿದ್ದಾರೆ. 15 ಲಕ್ಷ 17 ಸಾವಿರದ 42 ಮಂದಿ ಗೈರಾದವರು, 7 ಲಕ್ಷ 9 ಸಾವಿರದ 870 ಜನರು ಒಂದಕ್ಕಿಂತ ಹೆಚ್ಚು ಕಡೆ ಮತ ಹೊಂದಿದ್ದ ಡ್ಯೂಪ್ಲಿಕೇಟ್ ಮತದಾರರು ಹಾಗು 3 ಲಕ್ಷ 83 ಸಾವಿರದ 884 ಮಂದಿ ಇತರೆ ವಿಭಾಗದವರು ಸೇರಿದ್ದಾರೆ ಎಂದರು.

**ಸೆ.23ರ ವರೆಗೆ ಆಕ್ಷೇಪಣೆಗೆ ಅವಕಾಶ**

ಜೂನ್ 6 ರಿಂದ ಆಗಸ್ಟ್ 23ರವರೆಗೆ ಒಟ್ಟು 14 ಲಕ್ಷ 67 ಸಾವಿರದ 929 ಮಂದಿ ವಿವಿಧ ಫಾರ್ಮ್‌ಗಳನ್ನು ಪಡೆದುಕೊಂಡಿದ್ದಾರೆ. ಅದರಲ್ಲಿ ಫಾರ್ಮ್ ನಂಬರ್ 6ರಲ್ಲಿ 4,73,354, ಫಾರ್ಮ್ ನಂಬರ್ 6ಎ ನಲ್ಲಿ 3,880, ಫಾರ್ಮ್ ನಂಬರ್-7ರಲ್ಲಿ 67,307 ಮತ್ತು 9,23,388 ಜನರು ಫಾರ್ಮ್ ನಂಬರ್ 8 ಪಡೆದುಕೊಂಡಿದ್ದಾರೆ. ಆಗಸ್ಟ್ 24 ರಿಂದ ಸೆಪ್ಟೆಂಬರ್ 23ರ ವರೆಗೆ ಒಂದು ತಿಂಗಳ ಕಾಲ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಆಕ್ಷೇಪಣೆಗ ಳನ್ನು ಪರಿಶೀಲಿಸಿ ಅಕ್ಟೋಬರ್ 27ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದು ತಿಳಿಸಿದ್ದಾರೆ.





### ಅರ್ಜಿ ಸಲ್ಲಿಸುವುದು ಹೇಗೆ?

ಕರಡು ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೆ ಮತದಾರರು ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಬಹುದು. ಭೌತಿಕವಾಗಿ ERO/AERO ಮೂಲಕ ಅಥವಾ ಆನ್‌ಲೈನ್‌ನಲ್ಲಿ rcp ಪೋರ್ಟಲ್ ಮತ್ತು ಮೊಬೈಲ್ ಅಪ್ ಮೂಲಕ ಅರ್ಜಿ ಸಲ್ಲಿಸಬಹುದು. ಆಕ್ಷೇ ಪಣೆಗಳ ಪಟ್ಟಿ N ಕರ್ನಾಟಕ ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು, ಸಾರ್ವಜನಿಕರು ಪರಿಶೀಲಿಸಿ ಸಂಬಂಧಪಟ್ಟ ಇಆರ್‌ಓಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಪಟ್ಟಿಯನ್ನು ರಾಜಕೀಯ ಪಕ್ಷಗಳಿಗೆ ವಾರಕ್ಕೊಮ್ಮೆ ನೀಡಲಾಗುತ್ತದೆಂದು ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ತಿಳಿಸಿದ್ದಾರೆ.

### ಪ್ರಮುಖ ಅಂಶಗಳು

- ಫಾರಂ 6: 18 ವರ್ಷ ಪೂರ್ಣಗೊಂಡ, ಪೂರ್ಣಗೊಳ್ಳುವ ಹೊಸ ಮತದಾರರ ಹೆಸರು ಸೇರ್ಪಡೆಗೆ. ಸ್ಥಳಾಂತರಗೊಂಡವರು ಅಥವಾ ಗಣತಿ ವೇಳೆ ಬಿಟ್ಟುಹೋದ ಮತದಾರರು ಹೊಸದಾಗಿ ಹೆಸರು ಸೇರಿಸಲು (ಸ್ವಯಂ ಘೋಷಣಾ ಪತ್ರದೊಂದಿಗೆ).
- ಫಾರಂ 7: ಮತದಾರರ ಪಟ್ಟಿಯಲ್ಲಿರುವ ತಪ್ಪು/ಅನರ್ಹ ಹೆಸರುಗಳನ್ನು ತೆಗೆದುಹಾಕಲು (ಆಕ್ಷೇಪಣೆ ಸಲ್ಲಿಸಲು).
- ಫಾರಂ 8: ಮತದಾರರ ಗುರುತಿನ ಚೀಟಿಯ ವಿವರಗಳಲ್ಲಿ ತಿದ್ದುಪಡಿ ಮಾಡಲು.
- ಅರ್ಜಿ ಸಲ್ಲಿಸುವ ವಿಧಾನ: ನೇರವಾಗಿ ಸಂಬಂಧಪಟ್ಟ ಇಆರ್‌ಒ, ಎಇಆರ್‌ಒ, ಬಿಎಲ್‌ಒ (ಮತಗಟ್ಟೆ ಅಧಿಕಾರಿಗಳಿಗೆ) ಭೌತಿಕ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ವೆಬ್‌ಸೈಟ್: t rcp c ge t g , ಮೊಬೈಲ್ ಆಪ್: nn ಮೂಲಕ ಅವಕಾಶವಿದೆ.

# ಗುರು-ಶಿಷ್ಯರ ಸಂಬಂಧ ಹಾಲು ಜೇನಿನಂತೆ: ಶಂಭುನಾಥ ಶ್ರೀ

• ಪ್ರಜೋದಯ ವರದಿ



**ಹಾಸನ:** ಗುರು ಮತ್ತು ಭಕ್ತರ ನಡುವಿನ ಸಂಬಂಧಹಾಲು-ಸಕ್ಕರೆಯಂತೆ ಶ್ರೇಷ್ಟ. ಹಾಲಿನಲ್ಲಿ ಸಕ್ಕರೆ ಬೆರೆತಾಗ ಅದರ ಸಿಹಿ ಹರಡು ವಂತೆ ಗುರುಗಳ ಮಾರ್ಗ ದರ್ಶನ ಮತ್ತು ಭಕ್ತರ ನಿಷ್ಟೆ ಒಂದಾದಾಗ ಉತ್ತಮ ಸಂಸ್ಕಾರ, ಸದಾಚಾರ ಹಾಗು ಧಾರ್ಮಿಕ ಮೌಲ್ಯಗಳು ಬೆಳೆಯಲು ಸಾಧ್ಯವಾಗುತ್ತದೆಂದು ಆದಿಚುಂಚನ ಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ನಗರದ ಜವನೇಹಳ್ಳಿ ಮಠದಲ್ಲಿ ನಡೆದ ತ್ರಿಮೂರ್ತಿ ಗದ್ದುಗೆ ಸ್ಮರಣೋತ್ಸವದಲ್ಲಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿಯಲ್ಲಿ ಗುರು-ಶಿಷ್ಯರ ಪರಂಪರೆಗೆ ವಿಶಿಷ್ಟ ಸ್ಥಾನವಿದೆ. ಗುರುಗಳು ಕೇವಲ ಧಾರ್ಮಿಕ ಬೋಧನೆ ಮಾಡುವವ ರಲ್ಲ, ಸಮಾಜವನ್ನು ಸರಿಯಾದ ದಾರಿ ಯಲ್ಲಿ ಮುನ್ನಡೆಸುವ ಮಾರ್ಗ ದರ್ಶಕರು ಮತ್ತು ಸಂಸ್ಕಾರದ ದೀಪ ಬೆಳಗಿಸುವ ಶಕ್ತಿ ಎಂದರು.

ಗುರು ಮತ್ತು ಭಕ್ತರ ನಡುವೆ ಪರಸ್ಪರ ವಿಶ್ವಾಸ, ಗೌರವ ಹಾಗು ಆತ್ಮೀಯತೆ ಇರಬೇಕು. ಭಕ್ತರು ಕೇವಲ ಸಂಕಷ್ಟದ ಸಂದರ್ಭದಲ್ಲಿ ಮಾತ್ರ ದೇವರು ಮತ್ತು ಗುರುಗಳನ್ನು ನೆನೆಯದೆ, ಜೀವನದ ಪ್ರತಿಯೊಂದು ಹಂತದಲ್ಲೂ ಧರ್ಮ, ಸಂಸ್ಕಾರ ಮತ್ತು ಸತ್ಪಥದ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಮಾನವ ಜೀವನ ಸಾರ್ಥಕವಾಗಲು ಸಾಧ್ಯವೆಂದರು.

ಇಂತಹ ಪವಿತ್ರ ಸ್ಥಳಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿ ಮಾತ್ರವಲ್ಲದೆ, ಸಮಾಜದಲ್ಲಿ ಶಾಂತಿ, ಸೌಹಾರ್ದತೆ, ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸುತ್ತವೆ. ಕಾಲ ಬದಲಾದರೂ ನಮ್ಮ ಧಾರ್ಮಿಕ ಪರಂಪರೆ, ಮಠ-ಮಂದಿರಗಳ ಮೇಲಿನ ಭಕ್ತಿ ಹಾಗೂ ಹಿರಿಯರು ಹಾಕಿಕೊಟ್ಟಿರುವ ಸಂಸ್ಕಾರದ ಹಾದಿಯನ್ನು ಮುಂದುವರಿಸಿಕೊಂಡು ಹೋಗುವುದು ಪ್ರತಿ ಯೊಬ್ಬರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಮಠ ಮತ್ತು ಮಂದಿರಗಳ ಅಭಿವೃದ್ಧಿಗೆ ಸಮಾಜದ ಸಹಕಾರ ದೊರೆತಾಗ ಮಾತ್ರ ಕ್ಷೇತ್ರಗಳು ಮತ್ತಷ್ಟು ಬಲಿಷ್ಟವಾಗಿ ಬೆಳೆಯಲು ಸಾಧ್ಯ. ಭಕ್ತರು ದೇಣಿಗೆ, ಸೇವೆ, ಶ್ರಮದಾನ ಸೇರಿ ವಿವಿಧ ರೀತಿಯಲ್ಲಿ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳಬೇಕು. ಹಿರಿಯರು ಮಕ್ಕಳಿಗೆ ನಮ್ಮ ಪರಂಪರೆ, ಧಾರ್ಮಿಕ ಆಚರಣೆ ಹಾಗು ಗುರು-ಹಿರಿಯರಿಗೆ ಗೌರವ ನೀಡುವ ಸಂಸ್ಕಾರವನ್ನು ಕಲಿಸಬೇಕು. ಮಠಗಳು ಮತ್ತು ಧಾರ್ಮಿಕ ಸಂಸ್ಥೆಗಳು ಈ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಎಂದರು.

ಜವೇನಹಳ್ಳಿ ಮಠದ ಸಂಗಮೇಶ್ವರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ತ್ರಿಮೂರ್ತಿ ಗದ್ದುಗೆ ಸ್ಮರಣೋತ್ಸವ ಅಂಗವಾಗಿ ವಿಶೇಷ ಪೂಜೆ, ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಭಕ್ತರ ಸಮಾಗಮ ನಡೆ ಯಿತು. ದಾಸೋಹದ ವ್ಯವಸ್ಥೆಯನ್ನು ಪುನಿತ್ ಪಟೇಲ್ ನೆರವೇರಿಸಿದರು.

ಕಲ್ಮಠ ಕಂಪ್ಲಿ ಮಠದ ಅಭಿನವ ಪ್ರಭು ಸ್ವಾಮೀಜಿ, ರೇವಣ ಸಿದ್ದೇಶ್ವರ ಸ್ವಾಮೀಜಿ, ಜಯಾನಂದ ಸ್ವಾಮೀಜಿ, ಸಂಸದ ಶ್ರೇಯಸ್ ಪಟೇಲ್, ಎಂಸಿಇ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಿ.ಆರ್. ಗುರುದೇವ್, ಕಾಂಗ್ರೆಸ್ ಮುಖಂಡ ಬನವಾಸೆ ರಂಗಸ್ವಾಮಿ, ಕಾರ್ಯ ನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ. ಆರ್.ಕೆಂಚೇಗೌಡ, ಜವೇನಹಳ್ಳಿ ಮಠದ ಹಿತಾರಕ್ಷಣಾ ಸಮಿತಿ ಅಧ್ಯಕ್ಷ ಬಿ.ವಿ. ಉಮೇಶ್, ಕಾರ್ಯದರ್ಶಿ ಪರಮೇಶ್, ಸಹಕಾರ್ಯದರ್ಶಿ ಕಟ್ಟಾಯ ಶಿವಕುಮಾರ್, ಕಂಚಮಾರನ ಹಳ್ಳಿ ಕಾಂತರಾಜ್ ಮತ್ತಿತರರಿದ್ದರು.

# ದ್ವಿಭಾಷಾ ಶಿಕ್ಷಣ ನೀತಿ ಮರುಪರಿಶೀಲನೆಗೆ ಆಗ್ರಹ

• ಪ್ರಜೋದಯ ವರದಿ



**ಹಾಸನ:** ಸರ್ಕಾರಿ ಶಾಲೆಗಳಲ್ಲಿ ಜಾರಿಗೊಳಿಸಿರುವ ದ್ವಿಭಾಷಾ ಶಿಕ್ಷಣ ನೀತಿಯಲ್ಲಿ ಕನ್ನಡಕ್ಕೆ ಪ್ರಾಧಾನ್ಯತೆ ನೀಡಬೇಕೆಂದು ಆಗ್ರಹಿಸಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನಿಂದ ಸೋಮವಾರ ಜಿಲ್ಲಾಡಳಿತದ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯ ಸರ್ಕಾರ 2026-27ನೇ ಶೈಕ್ಷಣಿಕ ವರ್ಷದಿಂದ 15 ಜಿಲ್ಲೆಗಳ ಸರ್ಕಾರಿ ಶಾಲೆಗಳಲ್ಲಿ ಐದನೇ ತರಗತಿ ವರೆಗೆ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ದ್ವಿಭಾಷಾ ಬೋಧನೆ ಜಾರಿಗೊಳಿಸಿದೆ. ಅದರಿಂದ ಕನ್ನಡ ಮಾಧ್ಯಮದಲ್ಲಿ ಬೋಧಿಸುತ್ತಿರುವ ಶಿಕ್ಷಕರಿಗೆ ಇಂಗ್ಲಿಷ್‌ನಲ್ಲಿ ಬೋಧಿಸಲು ತರಬೇತಿ ನೀಡಲಾಗುತ್ತಿದೆ. ಇಂಗ್ಲಿಷ್‌ಗೆ ಹೆಚ್ಚಿನ ಆದ್ಯತೆ ನೀಡಿರುವುದು ಹಾಗು ಕನ್ನಡದಲ್ಲಿ ಉತ್ತರಿಸುವ ವಿದ್ಯಾರ್ಥಿಗಳಿಗೆ ಕಡಿಮೆ ಶ್ರೇಯಾಂಕ ನೀಡುವ ಸೂಚನೆಗಳಿರುವುದು ಕನ್ನಡ ಭಾಷೆಯ ಮೇಲಿನ ನಕಾರಾತ್ಮಕ ಪರಿಣಾಮಕ್ಕೆ ಕಾರಣವಾಗಬಹುದಾಗಿದೆ. ಭಾಷಾವಾರು ರಾಜ್ಯ ರಚನೆಯ ಆಶಯ, ಕರ್ನಾಟಕದ ಭಾಷೆ ಸಂಸ್ಕೃತಿಯ ಬೆಳವಣಿಗೆ ಇಂಗ್ಲಿಷ್‌ಗೆ ಹೆಚ್ಚಿನ ಆದ್ಯತೆ ನೀಡಿರುವುದು ಹಾಗು ಕನ್ನಡದಲ್ಲಿ ಉತ್ತರಿಸುವ ವಿದ್ಯಾರ್ಥಿಗಳಿಗೆ ಕಡಿಮೆ ಶ್ರೇಯಾಂಕ ನೀಡುವ ಸೂಚನೆಗಳಿರುವುದುಕನ್ನಡ ಭಾಷೆಯ ಮೇಲಿನ ನಕಾರಾತ್ಮಕ ಪರಿಣಾಮಕ್ಕೆ ಕಾರಣವಾಗಬಹುದಾಗಿದೆ.

ಮಾತೃಭಾಷೆಯ ಮೂಲಕ ಮಕ್ಕಳ ಆಲೋಚನಾ ಸಾಮರ್ಥ್ಯ ಮತ್ತು ಕಲಿಕೆಯ ಬೆಳವಣಿಗೆಗೆ ಹೆಚ್ಚಿನ ಅವಕಾಶ ದೊರೆಯುತ್ತದೆಂಬ ಅಂಶವನ್ನೂ ಮನವಿಯಲ್ಲಿ ಪ್ರಸ್ತಾಪಿಸಲಾಗಿದೆ. ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದ ರಾಜ್ಯ ಸರ್ಕಾರದ ನಿರ್ಧಾರವನ್ನು ತಕ್ಷಣ ಪರಿಶೀಲಿಸಿ ಕನ್ನಡ ಭಾಷೆ, ಕರ್ನಾಟಕದ ಅಸ್ತಿತ್ವ ಮತ್ತು ಸಾಂಸ್ಕೃತಿಕ ಘನತೆ ಸಂರಕ್ಷಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ವಿಭಾಗೀಯ ಸಹ ಸಂಯೋಜಕ ಕಟ್ಟೇಮನೆ ನಾಗೇಂದ್ರ, ಕಾರ್ಯದರ್ಶಿ ಎನ್.ಆರ್.ಪ್ರಶಾಂತ್ ಇತರರಿದ್ದರು.

# ಜಿಲ್ಲೆಯ ಸಮಸ್ಯೆ ಸಂಸತ್ ಅಧಿವೇಶನದಲ್ಲಿ ಪ್ರಸ್ತಾಪ

» ಮೊದಲನೇ ಪುಟದಿಂದ

ಮಕ್ಕಳ ಪೌಷ್ಟಿಕತೆ ಕಾಪಾಡಲು ಜಿಲ್ಲೆಗೆ ನಾಲ್ಕು (ಚನ್ನರಾಯಪಟ್ಟಣ,ಹೊಳೆನರಸೀಪುರ, ಆಲೂರು ಮತ್ತು ಅರಕಲಗೂಡು) ಹೊಸ ಎನ್‌ಆರ್‌ಸಿ ಕೇಂದ್ರಗಳನ್ನು ತೆರೆಯಲು ಅನುಮೋದನೆ ಸಿಕ್ಕಿದೆ. ಹಾಗೆಯೇ ತೆಂಗು ಬೆಳೆಗಾರರನ್ನು ಫಸಲ್ ಭಿಮಾ ವ್ಯಾಪ್ತಿಗೆ ಸೇರಿಸಬೇಕೆಂದು ಕೋರಲಾಗಿದೆ. ಶುಂಠಿ ಬೆಳೆಗಾರರಿಗೂ ವಿಮೆ ನೀಡಬೇಕು. ರಾಜಮುಡಿ ಅಕ್ಕಿಗೆ ಜಿಐ ಟ್ಯಾಗ್ ಪಡೆಯುವ ಕುರಿತು ಪ್ರಶ್ನೆ ಮಾಡಿದ್ದೇನೆ. ಜಿಐ ಅರ್ಜಿ ಇನ್ನೂ ರಿಜಿಸ್ಟ್ರಿಗೆ ಸಲ್ಲಿಕೆಯಾಗಿಲ್ಲವೆಂಬ ಎಂಬ ಉತ್ತರ ಬಂದಿದೆ ಎಂದರು.

ಅರಕಲಗೂಡು ತಾಲ್ಲೂಕಿಗೂ ರೈಲು ಸಂಪರ್ಕ, ಹಾಸನಕ್ಕೆ ಸಿಂಥೆಟಿಕ್ ಹಾಕಿ ಟರ್ಫ್ ಮಾಡಿ ಕೊಡಬೇಕೆಂದು ಕೇಂದ್ರ ಸರ್ಕಾರದ ಗಮನ ಸೆಳೆಯಲಾಗಿದೆ. ಜಿಲ್ಲೆಯಲ್ಲಿ 701 ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಅನುಮೋದನೆ ದೊರೆತಿದೆ. ಮಾದಕ ವಸ್ತುಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಗಮನ ಸೆಳೆದು, ಕಠಿಣ ಕಾನೂನು ಜಾರಿ ಜೊತೆಗೆ ಶಾಲೆ-ಕಾಲೇಜು ಮಟ್ಟ ದಲ್ಲಿ ಜಾಗೃತಿ ಮೂಡಿಸಲು ವಿನಂತಿಸಲಾಗಿದೆ ಎಂದರು.

ಪ್ರಮುಖವಾಗಿ ಹಾಸನಾಂಬೆ ದೇವಾಲಯದ ಸಮಗ್ರ ಅಭಿವೃದ್ಧಿ, ಭಕ್ತರಿಗೆ ಮೂಲಭೂತ ಸೌಕರ್ಯ, ಪ್ರವಾಸೋದ್ಯಮ ಸೌಲಭ್ಯ ಕಲ್ಪಿಸಲು ಪ್ರಸಾದ್ ಯೋಜನೆಯಡಿ ನೆರವು ಕೇಳಲಾಗಿದೆ. ಹಾಸನ ಜಿಲ್ಲೆಯ ಸಮಗ್ರ ಅಭಿವೃದ್ಧಿ ನೇರ ಮನವಿ ಸಲ್ಲಿಸಿದ್ದೇನೆ. ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಸಂಬಂಧ ಕೇಂದ್ರ ಭೂ ಸಾರಿಗೆ ಸಚಿವರನ್ನು ಭೇಟಿ ಮಾಡಿದ್ದು, ಅವರಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ. ಹಾಸನ ನಗರ ವ್ಯಾಪ್ತಿಯಲ್ಲಿ ಹೆದ್ದಾರಿ ಅಭಿವೃದ್ಧಿಗೆ 118 ಕೋ.ರೂ.ಗೆ ಅನುಮೋದನೆ ದೊರೆತಿದೆ ಎಂದು ತಿಳಿಸಿದರು.

ಬಾಣಾವರ-ಹುಳಿಯಾರ್ ರಸ್ತೆ ಅಗಲೀಕರಣಕ್ಕೆ ಅನುದಾನ, ಮೊಸಳೆಹೊಸಳ್ಳಿಯಲ್ಲಿ ಫ್ಲೈಓವರ್ ನಿರ್ಮಿಸಲು ಪತ್ರದ ಜೊತೆಗೆ ಮುಖಾಮುಖಿ ಭೇಟಿ ಮಾಡಿದ್ದೇನೆ. ಇದೇ ವಿಚಾರವಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಪತ್ರ ಬರೆದಿದ್ದಾರೆ.

ಆನೆ-ಮಾನವ ಸಂಘರ್ಷದ ಸಮಸ್ಯೆಯನ್ನು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆಗೆ ಕೇಂದ್ರ ಸಚಿವ ಭೂಪೇಂದರ್ ಯಾದವ್ ಅವರ ಗಮನಕ್ಕೆ ತರಲಾಗಿದ್ದು, ತುರ್ತು ಮಧ್ಯೆ ಪ್ರವೇಶಕ್ಕೆ ಮನವಿ ಮಾಡಿದ್ದೇನೆ. ರಾಜ್ಯ-ಕೇಂದ್ರ ಜಂಟಿ ಕಾರ್ಯಾಯೋಜನೆ ಮೂಲಕ ಸಮಸ್ಯೆಯ ವೈಜ್ಞಾನಿಕ ಅಧ್ಯಯನ ಮತ್ತು ಸಮಸ್ಯೆ ನಿವಾರಣೆಗೆ ಕೋರಿದ್ದೇನೆಂದು ಹೇಳಿದರು.

ಹಾಸನ-ಬೇಲೂರು ರಸ್ತೆ ಮತ್ತು ರೈಲು ಕಾಮಗಾರಿ ಬೇಗ ಶುರುವಾಗಿ ಮುಗಿಯಬೇಕೆಂದು ಮನವಿ ಸಲ್ಲಿಸಲಾಗಿದೆ.ಬೆಂಗಳೂರು-ಹಾಸನ ನಡುವೆ ಬೆಳಿಗ್ಗೆ ಇಂಟರ್ ಸಿಟಿ ರೈಲು ಓಡಿಸಲು ಕೋರಲಾಗಿದೆ. ಹಾಸನ-ಅರಸೀಕೆರೆ-ಮೈಸೂರು ನಡುವೆ ಡೆಮೋ ರೈಲು ಓಡಾಟಕ್ಕೆ ಕೋರಲಾಗಿದೆ. ಹಾಸನಕ್ಕೆ ಐಐಟಿ ತರಲು ಪ್ರಯತ್ನ ಮುಂದುವರಿದಿದೆ ಎಂದ ಅವರು ಹಾಸನಕ್ಕೆ 200 ಹಾಸಿಗೆಗಳ ಇಎಸ್‌ಐ ಆಸ್ಪತ್ರೆಗಾಗಿ ಮನವಿ ಸಲ್ಲಿಸಿದ್ದೇನೆ. ಜಿಲ್ಲೆಯ ಐತಿಹಾಸಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧವಾಗಿಯೇ ಮನವಿ ಮಾಡಿದ್ದೇನೆಂದರು.

### ರೇವಣ್ಣ ತಪ್ಪು ಮಾಹಿತಿ ನೀಡುವುದು ಬಿಡಲಿ

ಹಾಸನ: ಜಿಲ್ಲಾಧಿಕಾರಿ ಹಾಗು ಚುನಾವಣಾ ಆಯೋಗ ಗ್ರಾಮ ಪಂಚಾಯಿತಿ ಮೀಸಲಾತಿ ಪಟ್ಟಿ ತಯಾರಿಸಲು ಪ್ರಮಾಣಿಕವಾಗಿ ಕೆಲಸ ಮಾಡಿದ್ದಾರೆ. ಆದರೆ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಜನರಿಗೆ ತಪ್ಪು ಮಾಹಿತಿ ಕೊಡುವುದನ್ನು ಕಡಿಮೆ ಮಾಡಬೇಕೆನ್ನುವ ಮೂಲಕ ಸಂಸದ ಶ್ರೇಯಸ್ ಪಟೇಲ್ ಅವರು ಜಿಲ್ಲಾಧಿಕಾರಿ ಪರ ಬ್ಯಾಟ್ ಬೀಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೀಸಲಾತಿ ಹಂಚಿಕೆ ಸಂಪೂರ್ಣವಾಗಿ ಚುನಾ ವಣಾ ಆಯೋಗ ಮಾಡುವ ಕೆಲಸ. ಯಾರು ಇದರಲ್ಲಿ ಮೂಗು ತೂರಿಸುವಂತಿಲ್ಲ. ಈ ವಿಷಯದಲ್ಲಿ ಅಧಿಕಾರಿಗಳು ಮೈ ಎಲ್ಲಾ ಕಣ್ಣಾಗಿ ಕೆಲಸ ಮಾಡಬೇಕು. ಕಾನೂನು ಬದ್ಧವಾಗಿ ಮಾಡಿಲ್ಲವೆಂದರೆ ಅಹವಾಲು ಸಲ್ಲಿಸಲಿ ಎಂದರು.

ಮೀಸಲಾತಿ ನಿಗದಿ ಬಗ್ಗೆ ನನಗೆ ಮಾಹಿತಿಯೂ ಇಲ್ಲ. ರೇವಣ್ಣ ಅವರೇ ಇದರಲ್ಲಿ ಮೂಗು ತೂರಿಸಿದ್ದಾರೆ ಅನ್ನಿಸುತ್ತದೆ. ಅವರು ಹಿರಿಯ, ಅನುಭವಿ ರಾಜಕಾರಣಿ ಇದ್ದಾರೆ. ಜಿಲ್ಲಾಧಿಕಾರಿ ಸ್ಥಾನದಲ್ಲಿ ಮಹಿಳೆ ಇದ್ದಾರೆ, ಅವರಿಗೆ ಗೌರವ ಕೊಡಬೇಕೆಂದು ಹೇಳಿದರು.

ಹಿಂದಿನ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಗ್ಗೆ ಹೀಗೆ ಮಾತನಾಡಿದ್ದಾರೆಂಬುದು ಗೊತ್ತಿದೆ. ರೇವಣ್ಣ ಅವರಿಗೆ ಮಹಿಳೆಯರು ಬಗ್ಗೆ ಗೌರವ ಇಲ್ಲದಂತೆ ಕಾಣುತ್ತದೆ. ಕನಿಷ್ಠ ಗೌರವ ನೀಡಲಿಲ್ಲವೆಂದರೆ ಜನರೇ ತೀರ್ಮಾನ ಮಾಡಬೇಕು. ಇನ್ನಾದರೂ ಅಧಿಕಾರಿಗೆ ಗೌರವ ಕೊಡಲಿ. ಜಿಲ್ಲಾಧಿಕಾರಿ ಬಗ್ಗೆ ಅಸಂಬದ್ಧವಾಗಿ ಮಾತನಾಡುವುದನ್ನು ನಾನು ಖಂಡಿಸುತ್ತೇನೆ ಎಂದರು.

# ಪರಿಸರ ಸ್ನೇಹಿ ಗಣೇಶ ಮೂರ್ತಿಗೆ ಆದ್ಯತೆ ನೀಡಲು ಮನವಿ



• ಪ್ರಜೋದಯ ವರದಿ

**ಹಾಸನ:** ಗಣೇಶೋತ್ಸವ ಸಮೀಪಿಸುತ್ತಿರುವ ಹಿನ್ನಲೆಯಲ್ಲಿ ಪರಿಸರದ ಮೇಲೆ ದುಷ್ಪರಿಣಾಮ ಬೀರುವ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಓಪಿ) ಗಣೇಶ ಮೂರ್ತಿಗಳನ್ನು ಸಂಪೂರ್ಣ ನಿಷೇಧಿಸ ಬೇಕೆಂದು ಜಿಲ್ಲಾ ಗಣೇಶ ಮೂರ್ತಿ ಮಾರಾಟಗಾರರ ಸಂಘದಿಂದ ಸೋಮವಾರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.

ಕುಂಬಾರ ಸಂಘದ ಯುವ ಘಟಕದ ಅಧ್ಯಕ್ಷ ತಿಮ್ಮಪ್ಪಶೆಟ್ಟಿ ಅವರು ಮಾತನಾಡಿ, ಪಿಓಪಿ ಗಣೇಶ ಮೂರ್ತಿಗಳನ್ನು ಕೆರೆ, ನದಿ ಸೇರಿ ವಿವಿಧ ಜಲಮೂಲಗಳಲ್ಲಿ ವಿಸರ್ಜನೆ ಮಾಡುವು ದರಿಂದ ಅವುಗಳು ಸುಲಭವಾಗಿ ಕರಗುವುದಿಲ್ಲ. ಅದರಿಂದ ನೀರಿನ ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿ ಜಲಮೂಲಗಳ ಪರಿಸರ ವ್ಯವಸ್ಥೆಗೆ ಹಾನಿಯಾಗುವ ಸಾಧ್ಯತೆ ಇದೆ. ಜಲಚರಗಳಿಗೂ ತೊಂದರೆಯಾಗುವ ಆತಂಕವಿದೆ ಎಂದರು.

ಈ ಹಿನ್ನಲೆಯಲ್ಲಿ ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿಗಳ ಬಳಕೆಯನ್ನು ಉತ್ತೇಜಿಸುವುದು ಅಗತ್ಯವಾಗಿದೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಪಿಓಪಿ ಗಣೇಶ ಮೂರ್ತಿಗಳ ತಯಾರಿಕೆ, ಸಾಗಣೆ ಹಾಗು ಮಾರಾಟಕ್ಕೆ ಅನುಮತಿ ನೀಡಬಾರದೆಂದು ಆಗ್ರಹಿಸಿದರು.

ಸಂಘದ ರಮೇಶ್, ದಿಲೀಪ್, ಹೇಮಂತ್, ಗಂಗಾಧರ್ ಇತರರು ಉಪಸ್ಥಿತರಿದ್ದರು.

# ಕರಡು ಮತದಾರರ ಪಟ್ಟಿ: ಸಕಲೇಶಪುರ ಕ್ಷೇತ್ರದಲ್ಲಿ 1.87 ಲಕ್ಷ ಮತದಾರರು

• ಪ್ರಜೋದಯ ವರದಿ



**ಸಕಲೇಶಪುರ:** ಸಕಲೇಶಪುರ ವಿಧಾನ ಸಭಾ ಕ್ಷೇತ್ರದಲ್ಲಿ ಹದಿನೆಂಟು ಸಾವಿರದ ಅರವತ್ತೆರಡು ಮತದಾರರನ್ನು ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆಯ ವೇಳೆ ಕೈಬಿಡಲಾಗಿದೆ ಎಂದು ಉಪವಿಭಾಗಾಧಿಕಾರಿ ಹುಲ್ಲುಮನಿತಿಮ್ಮಣ್ಣ ಅವರು ಹೇಳಿದರು.

ಸೋಮವಾರ ಉಪವಿಭಾಗಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿಗಳ ವಿಶೇಷ ಪರಿಷ್ಕರಣೆ 2026ರ ಅಂಗವಾಗಿ 199 ಸಕಲೇಶಪುರ ವಿಧಾನಸಭಾ ಕ್ಷೇತ್ರದ ಕರಡು ಮತದಾರರ ಪಟ್ಟಿ ಪ್ರಕಟಣೆ ಕುರಿತು ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಅಧ್ಯಕ್ಷರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿ, ವಿಶೇಷ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಮತದಾರರಿಂದ ನಮೂನೆಗ ಳನ್ನು ಸ್ವೀಕರಿಸಿ ಪರಿಶೀಲನೆ ನಡೆಸಲಾಗಿದೆ. ಮರಣ, ಶಾಶ್ವತ ಸ್ಥಳಾಂತರ, ಗೈರುಹಾಜರಿ, ಇತರೆ ಕಾರಣಗಳು, ಮ್ಯಾಪಿಂಗ್ ಆಗದಿರುವುದು ಹಾಗೂ ಅನಾಮಲಿಗಳ ಆಧಾರದ ಮೇಲೆ ಮತದಾರರ ಮಾಹಿತಿಯನ್ನು ವರ್ಗೀಕರಿಸಿ ಕರಡು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಕ್ಷೇತ್ರದಲ್ಲಿ ಒಟ್ಟು 2,05,262 ಮತದಾರರ ಪೈಕಿ 1,87,196 ಮತದಾರರನ್ನು ಕರಡು ಪಟ್ಟಿಯಲ್ಲಿ ಸೇರ್ಪ ಡೆಗೊಳಿಸಲಾಗಿದ್ದು, ಇದು ಶೇ.91.20ರಷ್ಟಾಗಿದೆ. ಮ್ಯಾಪಿಂಗ್ ಆಗದಿ ರುವುದು ಹಾಗೂ ಅನಾ ಮಲಿಗಳಿಗೆ ಸಂಬಂಧಿಸಿದಂತೆ ಒಟ್ಟು 6,700 ಪ್ರಕರಣಗಳನ್ನು ಗುರುತಿಸಲಾಗಿದೆ ಎಂದು ತಿಳಿಸಿದರು.

**295 ಮತಗಟ್ಟೆಗಳಿಗೆ ಹೆಚ್ಚಳ:** ಸಕಲೇಶಪುರ ವಿಧಾನಸಭಾ ಕ್ಷೇತ್ರದಲ್ಲಿ ಈ ಹಿಂದೆ 285 ಮತಗಟ್ಟೆಗಳಿದ್ದವು. ಮತದಾರರ ಸಂಖ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ಹೊಸ ಮತಗಟ್ಟೆಗಳನ್ನು ಸ್ಥಾಪಿಸುವ ಕುರಿತು ರಾಜಕೀಯ ಪಕ್ಷಗಳ ಸಲಹೆ ಪಡೆದು ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಂತೆ 10 ಹೊಸ ಮತಗಟ್ಟೆಗಳನ್ನು ಸೇರ್ಪಡೆಗೊಳಿಸಲಾಗಿದ್ದು, ಇದೀಗ ಒಟ್ಟು 295 ಮತಗಟ್ಟೆಗಳಿವೆ ಎಂದು ಹೇಳಿದರು.

**6,700 ಪ್ರಕರಣಗಳಿಗೆ ನೋಟಿಸ್:** ಕ್ಷೇತ್ರದಲ್ಲಿ 3,634 ಮ್ಯಾಪಿಂಗ್ ಆಗದ ಪ್ರಕರಣಗಳು ಹಾಗೂ 3,075 ಅನಾಮಲಿ ಪ್ರಕರಣಗಳು ಸೇರಿ ಒಟ್ಟು 6,700 ಪ್ರಕರಣಗಳನ್ನು ಗುರುತಿಸಲಾಗಿದೆ. ಸಂಬಂಧಪಟ್ಟ ಮತದಾರರಿಗೆ ಇಂದಿನಿಂದ ನೋಟೀಸ್ ನೀಡಲಾಗುತ್ತಿದ್ದು, ವಿಚಾರಣೆಗೆ ಏಳು ದಿನಗಳ ಕಾಲಾವಕಾಶ ನೀಡಲಾಗುವುದು. ನೋಟಿಸ್‌ನಲ್ಲಿ ವಿಚಾರಣೆ ನಡೆಯುವ ಸ್ಥಳ, ದಿನಾಂಕ ಹಾಗೂ ಮತದಾರರ ವಿವರಗಳನ್ನು ನಮೂದಿಸಲಾಗುವುದು. ಅಗತ್ಯವಿದ್ದಲ್ಲಿ 2 ಬಾರಿ ನೋಟೀಸ್ ನೀಡಲಾಗುವುದೆಂದು ತಿಳಿಸಿದರು.

ಒಟ್ಟು 11 ಎಇಆರ್‌ಒಗಳ ನೇತೃತ್ವದಲ್ಲಿ ಗ್ರಾಮ ಪಂಚಾಯಿತಿ ಹಾಗೂ ವಾರ್ಡ್‌ವಾರು ವಿಚಾರಣೆ ನಡೆಸಲಾಗುತ್ತದೆ. ಪ್ರತಿದಿನ ಸುಮಾರು 30ರಿಂದ 40 ಪ್ರಕರಣಗಳನ್ನು ವಿಚಾರಣೆ ನಡೆಸಿ, ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಗುವುದು. ಅರ್ಹ ಮತದಾರರು ಯಾವುದೇ ಕಾರಣಕ್ಕೂ ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದರು.

**ಹಕ್ಕು, ಆಕ್ಷೇಪಣೆಗೆ ಸೆ.23ರ ವರೆಗೆ ಅವಕಾಶ**

ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದ ಅರ್ಹ ಮತದಾರರು ನಮೂನೆ 6 ಸಲ್ಲಿಸಿ ಹೆಸರು ಸೇರ್ಪಡೆಗೆ ಅರ್ಜಿ ಸಲ್ಲಿಸಬಹುದು. ಪಟ್ಟಿಯಲ್ಲಿರುವ ಹೆಸರು, ಸೇರ್ಪಡೆ ಅಥವಾ ತೆಗೆದು ಹಾಕುವಿಕೆಗೆ ಸಂಬಂಧಿಸಿದಂತೆ ನಮೂನೆ 7 ಹಾಗೂ ನಮೂನೆ 8ರ ಮೂಲಕ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಆ.24ರಿಂದ ಸೆ.23ರ ವರೆಗೆ ಅವಕಾಶ ಕಲ್ಪಿಸಲಾಗಿದೆಂದು ತಿಳಿಸಿದರು.

ವಿಶೇಷ ಪರಿಷ್ಕರಣೆ ವೇಳೆ 5,336 ಮರಣ ಪ್ರಕರಣಗಳು, 9,774 ಶಾಶ್ವತ ಸ್ಥಳಾಂತರ ಪ್ರಕರಣಗಳು, 1,171 ಗೈರುಹಾಜರಿ ಪ್ರಕರಣಗಳು ಹಾಗೂ 44 ಇತರೆ ಪ್ರಕರಣಗಳು ಗುರುತಿ ಸಲಾಗಿದೆ. ಈ ಪ್ರಕರಣಗಳ ಕುರಿತು ಸಾರ್ವಜನಿಕರು ಯಾವುದೇ ಆಕ್ಷೇಪಣೆ ಹೊಂದಿದ್ದರೆ ನಿಗದಿತ ಅವಧಿಯಲ್ಲಿ ಸಲ್ಲಿಸಬಹುದು ಎಂದರು.

ಅಗತ್ಯ ದಾಖಲೆಗಳಿಲ್ಲದಿದ್ದರೂ ಅರ್ಹತೆ ಹೊಂದಿರುವ ವ್ಯಕ್ತಿಗಳ ವಿಚಾರದಲ್ಲಿ ನಿಯಮಾನುಸಾರ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಂಡು ಪರಿಶೀಲನೆ ನಡೆಸಲಾಗುವುದು. ವಿಶೇಷವಾಗಿ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ವಿಚಾರಣಾ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಲಾಗುವುದೆಂದರು.

ತಹಶೀಲ್ದಾರ್‌ರಾದ ಮಲ್ಲಿಕಾರ್ಜುನ್, ಸುಪ್ರೀತ್, ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ, ಚುನಾವಣಾ ಇಲಾಖೆಯ ಜನಾರ್ಧನ್, ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಇದ್ದರು.

# ನಿಮ್ಮ ದುರಹಂಕಾರ ಮನೆಯಲ್ಲಿ ಇಟ್ಟುಕೊಳ್ಳಿ

» ಮೊದಲನೇ ಪುಟದಿಂದ

**ಹಾಸನಾಂಬ ದರ್ಶನಕ್ಕೆ ಹೋಗುವುದಿಲ್ಲ**

ಈ ಜಿಲ್ಲಾಧಿಕಾರಿಗೆ ಹೋಲಿಸಿದರೆ ಹಿಂದೆ ಇದ್ದ ಜಿಲ್ಲಾಧಿಕಾರಿ (ಸಿ.ಸತ್ಯಭಾಮ) ಪರವಾಗಿಲ್ಲವೆಂದು ಹೇಳಿದ್ದೇನೆ. ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿಯೂ ಮಹಿಳೇ ಅಲ್ಲವೇ. ಅವರ ಬಗ್ಗೆ ನಾನು ಏನಾದರೂ ಮಾತನಾಡಿದ್ದೇನಾ. ಸುಖಾ ಸುಮ್ಮನೆ ಯಾರ ಬಗ್ಗೆಯೋ ಏನೇನೋ ಮಾತನಾಡುವುದಿಲ್ಲ. ಅಧಿಕಾರಿಗಳನ್ನು ಬೆಳಿಗ್ಗೆಯಿಂದ ಸಂಜೆಯವರೆಗೆ ಕಚೇರಿ ಯಲ್ಲಿ ಈ ಜಿಲ್ಲಾಧಿಕಾರಿ ಕೂರಿಸಿ ಕೊಳ್ಳುತ್ತಾರೆ. ಕಚೇರಿ ಗುಮಾಸ್ತರು ನರಕಯಾತನೆ ಅನು ಭವಿಸುತ್ತಿದ್ದಾರೆ. ನಾನು ಹೇಳುತ್ತಿರುವುದು ಸುಳ್ಳಾಗಿದ್ದರೆ ಹಾಸನಾಂಬ ದೇವಾಲಯದಲ್ಲಿ ಪ್ರಮಾಣ ಮಾಡಲಿ ಎಂದು ಸವಾಲೆಸೆದರು.

ಹಾಸನಾಂಬ ಜಾತ್ರಾ ಪೂರ್ವಭಾವಿ ಸಭೆಗೆ ಸೌಜನ್ಯಕ್ಕಾದರೂ ನನ್ನ ಕರೆಯಬೇಕಿತ್ತು. ನಾನು ಈ ವರ್ಷ ಹಾಸನಾಂಬ ದರ್ಶನಕ್ಕೆ ಬರುವುದಿಲ್ಲ. ಈ ಜಿಲ್ಲಾಧಿಕಾರಿಯಿಂದ ನಾನು ಕಲಿಯಬೇಕಾಗಿರುವುದು ಏನೂ ಇಲ್ಲ. ದುರಹಂಕಾರ ಏನೇ ಇದ್ದರೂ ಅವರ ಮನೇಲಿ ಇಟ್ಟುಕೊಳ್ಳಲಿ. ಅವರಿಗೆ ಭಗವಂತ ಒಳ್ಳೆಯದು ಮಾಡಲಿ. ಇನ್ನು ಒಂದೂವರೆ ವರ್ಷ ಅವರೇ ಜಿಲ್ಲಾಧಿಕಾರಿ ಆಗಿರಲಿ. ಮುಂದೆಯೂ ಕಾಂಗ್ರೆಸ್ ಸರ್ಕಾರವೇ ಅಧಿಕಾರಕ್ಕೆ ಬರುವಂತೆ ಕೆಲಸ ಮಾಡಲಿ ಎಂದು ಛೇಡಿಸಿದರು.

# ಗ್ರಾ.ಪಂ. ಮೀಸಲಾತಿ ವಿರೋಧಿಸಿ ಜೆಡಿಎಸ್ ಪ್ರತಿಭಟನೆ

» ಮೊದಲನೇ ಪುಟದಿಂದ

ಪ್ರಭಾವ ಬೀರಿದ್ದಾರೆಯೇ ಎಂಬ ಪ್ರಶ್ನೆ ಕಾಡುತ್ತಿದೆ ಎಂದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಅವರು ಮಾತನಾಡಿ, ಮೀಸಲಾತಿ ನಿಗದಿಯಲ್ಲಿ ಅನ್ಯಾಯವಾಗಿದ್ದು, ಅವೈಜ್ಞಾನಿಕವಾಗಿ ಮಾಡಲಾಗಿದೆ. ಸಣ್ಣಪುಟ್ಟ ಸಮಾಜದವರಿಗೆ ಅವಕಾಶ ಸಿಗಬೇಕೆಂದು ಮೀಸಲಾತಿ ಜಾರಿಗೊಳಿಸಲಾಗಿದೆ. ಬೇಲೂರಿನ ನೇರ್ಲಿಗೆಯಲ್ಲಿ ಕುರುಬ ಸಮುದಾಯದವರು ಹೆಚ್ಚಿದ್ದರೂ ಸಾಮಾನ್ಯ ವರ್ಗಕ್ಕೆ ಮೀಸಲು ನಿಗದಿಪಡಿಸಲಾಗಿದೆ. ಜಿಲ್ಲಾಧಿಕಾರಿ ಕಾಂಗ್ರೆಸ್ ಏಜೆಂಟರಂತೆ ಕೆಲಸ ಮಾಡುತ್ತಿದ್ದಾರೆ. ಈ ನೀತಿಯನ್ನು ನಾವು ಯಾವ ಕಾರಣಕ್ಕೂ ಸಹಿಸುವುದಿಲ್ಲ. ಆಗಿರುವ ಲೋಪ ಸರಿಪಡಿಸಲು 15 ದಿನಗಳ ಸಮಯ ನೀಡುತ್ತೇವೆ. ತಿದ್ದುಪಡಿ ಮಾಡದಿದ್ದರೆ ಕಾನೂನು ಹೋರಾಟ ಮುಂದುವರಿಸುತ್ತೇವೆಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎಸ್. ದ್ಯಾವೇಗೌಡ, ಸಕಲೇಶಪುರ ಅಧ್ಯಕ್ಷ ಸೋಮಣ್ಣ, ಒಕ್ಕಲಿಗರ ಸಂಘದ ನಿರ್ದೇಶಕ ರಘುಗೌಡ, ಆಲೂರು ತಾಲ್ಲೂಕು ಅಧ್ಯಕ್ಷ ಮಂಜೇಗೌಡ, ನಗರಸಭೆ ಮಾಜಿ ಅಧ್ಯಕ್ಷ ಸಿ.ಆರ್.ಶಂಕರ್, ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜ್, ಮುಖಂಡರಾದ ವಾಸುದೇವ್, ಹೊನ್ನವಳ್ಳಿ ಸತೀಶ್, ಗಿರೀಶ್, ಕಮಲ್ ಕುಮಾರ್, ಜಿಲ್ಲಾ ವಕ್ತಾರ ಹೊಂಗೆರೆ ರಘು, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಜಗದೀಶ್ ರಾಮಘಟ್ಟ ಮತ್ತಿತರರಿದ್ದರು.

# ಕಾಡಾನೆ ದಾಳಿ: ಭತ್ತ, ಅಡಿಕೆ ಬೆಳೆ ಹಾನಿ

• ಪ್ರಜೋದಯ ವರದಿ



**ಸಕಲೇಶಪುರ:** ತಾಲ್ಲೂಕಿನ ಅರೆಕೆರೆ, ಶಾಂತಪುರ ಸೇರಿ ಸುತ್ತಮುತ್ತಲಿನ ಗ್ರಾಮದಲ್ಲಿ ಕಾಡಾನೆಗಳು ದಾಳಿ ನಡೆಸಿ ಅಡಿಕೆ ಹಾಗು ಭತ್ತದ ಬೆಳೆಯನ್ನು ತಿಂದು, ತುಳಿದು ಹಾನಿಗೊಳಿಸಿ ರುವ ಹಿನ್ನಲೆ ವಲಯ ಅರಣ್ಯಾಧಿಕಾರಿ, ಗಸ್ತು ಪಾಲಕರು ಹಾಗು ಎಟಿಎಫ್ ತಂಡದ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಕಳೆದ ರಾತ್ರಿ ಗ್ರಾಮದ ನರೇಶ್ ಹಾಗು ಕಾಂತರಾಜು ಅವರಿಗೆ ಸೇರಿದ ಭತ್ತದ ಗದ್ದೆ ಮತ್ತು ಅಡಿಕೆ ತೋಟಕ್ಕೆ ಕಾಡಾನೆಗಳು ನುಗ್ಗಿದ್ದು, ಅಡಿಕೆ ಹಾಗೂ ಭತ್ತದ ಬೆಳೆಯನ್ನು ತಿಂದು, ತುಳಿದು ನಷ್ಟಪಡಿಸಿರುವುದು ಪರಿಶೀಲನೆ ವೇಳೆ ಕಂಡುಬಂದಿದೆ. ಬೆಳೆ ಹಾನಿಯನ್ನು ಪರಿಶೀಲಿಸಿದ ಅರಣ್ಯ ಇಲಾಖೆ ಅಧಿಕಾರಿಗಳು, ನಿಯಮಾನುಸಾರ ಸೂಕ್ತ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಲಾಗುವುದೆಂದು ರೈತರಿಗೆ ಭರವಸೆ ನೀಡಿದರು.

ಅರಣ್ಯ ಸಿಬ್ಬಂದಿ ಕಾಡಾನೆಗಳ ಚಲನವಲನದ ಕುರಿತು ಗ್ರಾಮಸ್ಥರಿಗೆ ಮಾಹಿತಿ ನೀಡಿ, ಕಾಡಾನೆಗಳು ಕಾಣಿಸಿಕೊಂಡ ಸಂದರ್ಭದಲ್ಲಿ ಎಚ್ಚರಿಕೆಯಿಂದ ಇರುವಂತೆ ಹಾಗು ಸುರಕ್ಷಾ ಕ್ರಮ ಪಾಲಿಸುವಂತೆ ವಲಯ ಅರಣ್ಯಾಧಿಕಾರಿ ಹೇಮಾಂತ್ ಕುಮಾರ್ ಸೂಚಿಸಿದರು.




**ಬೇಲೂರು: ತಾಲ್ಲೂಕಿನ ಅರೇಹಳ್ಳಿ ಹೋಬಳಿಯ ನಾರ್ವೆ ಅಂಗನವಾಡಿ ಕೇಂದ್ರಕ್ಕೆ ಅರೇಹಳ್ಳಿ ರೋಟರಿ ಸಂಸ್ಥೆಯ ವತಿಯಿಂದ ಕಲಿಕಾ ಸಾಮಾಗ್ರಿ ವಿತರಿಸಲಾಯಿತು. ರೋಟರಿ ಸಂಸ್ಥೆಯ ಅಧ್ಯಕ್ಷ ಮಹಂತ್ ನಾರ್ವೆ, ಕಾರ್ಯದರ್ಶಿ ಎಂ.ಎಸ್.ವಿಜಯ್, ಅಂಗನವಾಡಿ ಶಿಕ್ಷಕಿ ಹಾಗು ಇತರರು ಉಪಸ್ಥಿತರಿದ್ದರು.**

### ಬಸ್‌ನಲ್ಲಿ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಸಕಲೇಶಪುರ:** ಕೆಎಸ್‌ಆರ್‌ಟಿಸಿ ಬಸ್‌ನ ಲಗ್ಗೇಜ್ ರ್‍ಯಾಕ್‌ನಲ್ಲಿಟ್ಟಿದ್ದ 30 ಗ್ರಾಂ ತೂಕದ ಚಿನ್ನಾಭರಣದ ಬ್ಯಾಗ್ ಕಳವು ಮಾಡಿರುವ ಘಟನೆ ನಡೆದಿದೆ. ತೆಲಂಗಾಣ ಮೂಲದ ಭಾರತಿದೇವಿ ಎಂಬುವವರಿಗೆ ಸೇರಿದ ಆಭರಣ ಕಳುವಾಗಿದೆ. ಬೆಂಗಳೂರಿ ನಿಂದ ಧರ್ಮಸ್ಥಳಕ್ಕೆ ಬರುತ್ತಿದ್ದ ಅವರು ಲಗ್ಗೇಜ್ ರ್‍ಯಾಕ್‌ನಲ್ಲಿ ಬ್ಯಾಗ್ ಇಟ್ಟಿದ್ದರು. ಪಟ್ಟಣದ ಬಸ್ ನಿಲ್ದಾಣ ಸಮೀಪ ಬಂದಾಗ ಬ್ಯಾಗ್ ನಾಪತ್ತೆಯಾಗಿರುವುದು ತಿಳಿದಿದೆ. 2 ಬ್ರೇಸ್‌ಲೈಟ್, ಕೊರಳಚೈನ್, ಚಿನ್ನದ ಮಕ್ಕಳ ಕಾಲು ಚೈನ್ ಸೇರಿ ಒಟ್ಟು 30 ಗ್ರಾಂ ತೂಕದ ಚಿನ್ನಾಭರಣ ಕಳುವಾಗಿದೆ.

# ಕ್ಷಯ ರೋಗಿಗಳ ಆರೋಗ್ಯ ಸುಧಾರಣೆಗೆ ಪೌಷ್ಟಿಕ ಆಹಾರ ಅಗತ್ಯ

• ಪ್ರಜೋದಯ ವರದಿ




**ಬೇಲೂರು:** ಕ್ಷಯ ರೋಗಿಗಳ ಆರೋಗ್ಯ ಸುಧಾರಣೆಗೆ ಪೌಷ್ಟಿಕ ಆಹಾರ ಅಗತ್ಯವಾಗಿದ್ದು, ರೋಗಿಗಳಲ್ಲಿ ಧೈರ್ಯ ಮತ್ತು ಆತ್ಮವಿಶ್ವಾಸ ತುಂಬುವ ಉದ್ದೇಶದಿಂದ ಪೌಷ್ಟಿಕ ಆಹಾರದ ಕಿಟ್‌ಗಳನ್ನು ವಿತರಿಸಲಾಗುತ್ತಿದೆಂದು ರೋಟರಿ ಕ್ಲಬ್ ಅಧ್ಯಕ್ಷ ಬಿ.ಬಿ.ಶಿವರಾಜು ಅವರು ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಟರಿ ಕ್ಲಬ್ ವತಿಯಿಂದ ಹಮ್ಮಿಕೊಂಡಿದ್ದ ಕ್ಷಯ ರೋಗಿಗಳಿಗೆ ಉಚಿತ ಪೌಷ್ಟಿಕ ಆಹಾರ ಕಿಟ್ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರೋಟರಿ ಕ್ಲಬ್ ನಿರಂತರವಾಗಿ ವಿವಿಧ ಸೇವಾ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಕ್ಷಯರೋಗಿಗಳಿಗೆ ನೀಡುತ್ತಿರುವ ಪೌಷ್ಟಿಕ ಆಹಾರದ ಕಿಟ್ ಸಣ್ಣ ನೆರವಾಗಿದ್ದರೂ, ಅದರ ಹಿಂದೆ ಇರುವ ಕಾಳಜಿ ಮತ್ತು ಮಾನವೀಯತೆ ಬಹಳ ದೊಡ್ಡದು. ರೋಗಿಗಳೊಂದಿಗೆ ಪ್ರೀತಿ ಹಾಗೂ ವಿಶ್ವಾಸದಿಂದ ನಡೆದುಕೊಂಡು ಅವರಿಗೆ ಆತ್ಮಸ್ಥೈರ್ಯ ತುಂಬುವುದು ಸಮಾಜದ ಜವಾಬ್ದಾರಿ. ಸೇವೆ ಮೊದಲು, ಸ್ವಾರ್ಥ ನಂತರ ಎಂಬ ಧ್ಯೇಯದೊಂದಿಗೆ ರೋಟರಿ ಕ್ಲಬ್ ಮುಂದಿನ ದಿನಗಳಲ್ಲಿಯೂ ಆರೋಗ್ಯ, ಪರಿಸರ, ಶಿಕ್ಷಣ ಹಾಗೂ ಜನಪರ ಸೇವಾ ಕಾರ್ಯಕ್ರಮಗಳನ್ನು ಮುಂದುವರಿಸಲಿದೆ ಎಂದರು.

ಕ್ಷಯರೋಗಿಗಳ ರೋಗನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಉತ್ತಮ ಗುಣಮಟ್ಟದ ಬೇಳೆ ಕಾಳುಗಳು, ರಾಗಿ ಹಿಟ್ಟು, ಸಾವಯವ ಆಹಾರ ಪದಾರ್ಥಗಳು, ಖರ್ಜೂರ, ದ್ರಾಕ್ಷಿ, ಅಕ್ಕಿ ಸೇರಿ 9 ತರಹದ ಅಗತ್ಯ ಪೌಷ್ಟಿಕ ಆಹಾರವನ್ನು ಕಿಟ್‌ನಲ್ಲಿ ನೀಡಲಾಗುತ್ತಿದೆ. ನಿಯಮಿತವಾಗಿ ಪೌಷ್ಟಿಕ ಆಹಾರ ಸೇವಿಸುವುದರಿಂದ ರೋಗಿಗಳ ದೈಹಿಕ ಸಾಮರ್ಥ್ಯ ಹಾಗೂ ರೋಗನಿರೋಧಕ ಶಕ್ತಿ ಹೆಚ್ಚಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ|| ವಿಜಯ್ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಪ್ರಸ್ತುತ 46 ಮಂದಿ ಕ್ಷಯರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ರೋಟರಿ ಕ್ಲಬ್ ವತಿಯಿಂದ ಪೌಷ್ಟಿಕ ಆಹಾರದ ಕಿಟ್ ಇರುವುದು ತುಂಬಾ ಉಪಯುಕ್ತವಾದದ್ದು, ರೋಟರಿ ಸಮಸ್ಯೆ ಮುಂದೆಯೂ ತಾಲ್ಲೂಕಿನ ಎಲ್ಲಾ ಕ್ಷಯ ರೋಗಿಗಳಿಗೆ ಪೌಷ್ಟಿಕಾಂಶದ ಕಿಟ್ಟ ನೀಡುವಂತೆ ಮನವಿ ಮಾಡಿ ಕ್ಷಯ ರೋಗವನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ಪಡೆಯುವುದು ಮುಖ್ಯ. ಮೂರು ವಾರಗಳಿಗಿಂತ ಹೆಚ್ಚು ಕಾಲ ನಿರಂತರ ಕೆಮ್ಮು, ತೂಕ ಇಳಿಕೆ, ಹಸಿವು ಕಡಿಮೆಯಾಗುವುದು ಸೇರಿ ವಿವಿಧ ಲಕ್ಷಣಗಳು ಕಂಡುಬಂದರೆ ಆಸ್ಪತ್ರೆಗೆ ತೆರಳಿ ಪರೀಕ್ಷಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ವೈದ್ಯಾಧಿಕಾರಿ ಡಾ|| ಸತೀಶ್ ಅವರು ಮಾತನಾಡಿ, ಕ್ಷಯರೋಗಿಗಳನ್ನು ಗುರುತಿಸಿ ಅವರಿಗೆ ಪೌಷ್ಟಿಕ ಆಹಾರ ಒದಗಿಸುವ ಮೂಲಕ ರೋಟರಿ ಸಂಸ್ಥೆ ತೋರಿಸುತ್ತಿರುವ ಸಾಮಾಜಿಕ ಕಳಕಳಿ ಶ್ಲಾಘನೀಯವಾಗಿದೆ. ಕ್ಷಯರೋಗ ಪತ್ತೆಯಾದವರಿಗೆ ಸರ್ಕಾರದ ವತಿಯಿಂದ ಪರೀಕ್ಷೆ ಮತ್ತು ಚಿಕಿತ್ಸೆ ಸೇರಿ ಅಗತ್ಯ ಸೇವೆಗಳು ಉಚಿತವಾಗಿ ದೊರೆಯುತ್ತಿದ್ದು, ರೋಗಿಗಳು ನಿಯಮಿತವಾಗಿ ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖರಾಗಬೇಕು. ಸಾರ್ವಜನಿಕರು ಹಾಗೂ ಸಂಘ-ಸಂಸ್ಥೆಗಳು ಕ್ಷಯರೋಗಿಗಳನ್ನು ದತ್ತು ಪಡೆದು ಪೌಷ್ಟಿಕ ಆಹಾರ ಒದಗಿಸುವ ಮೂಲಕ ಸಹಕರಿಸಬೇಕೆಂದರು.

ರೋಟರಿ ಕ್ಲಬ್ ವಲಯ 8ರ ಸಹಾಯಕ ಗೌರ್ನರ್ ಡಾ|| ಎಸ್.ಗಣೇಶ್ ಅವರು ಮಾತನಾಡಿ, ರೋಟರಿ ಸಂಸ್ಥೆ ಆರೋಗ್ಯ, ಶಿಕ್ಷಣ ಹಾಗೂ ಸಮಾಜ ಸೇವೆಯ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಪೊಲಿಯೋ ಮುಕ್ತಗೊಳಿಸುವಲ್ಲಿ ರೋಟರಿ ಸಂಸ್ಥೆ ಪ್ರಮುಖ ಪಾತ್ರ ವಹಿಸಿದ್ದು, ಇದೀಗ ಕ್ಷಯರೋಗ ಮುಕ್ತ ದೇಶ ನಿರ್ಮಾಣದ ನಿಟ್ಟಿ ನಲ್ಲಿಯೂ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ. ಕ್ಷಯರೋಗಿಗಳಿಗೆ ಪೌಷ್ಟಿಕ ಆಹಾರ ನೀಡುವಂತಹ ಸೇವಾ ಕಾರ್ಯಗಳು ರೋಗಿಗಳ ಆರೋಗ್ಯ ಸುಧಾರಣೆಯ ಜೊತೆಗೆ ಸಮಾಜದಲ್ಲಿ ಮಾನವೀಯತೆಯ ಸಂದೇಶವನ್ನು ಸಾರುತ್ತವೆ ಎಂದರು.

ರೋಟರಿ ಕ್ಲಬ್ ಕಾರ್ಯದರ್ಶಿ ರಾಘವೇಂದ್ರ, ಸದಸ್ಯರಾದ ವೈ.ಡಿ.ಲೋಕೇಶ್, ಮೊಗಪ್ಪ ಗೌಡ, ಪುಟ್ಟು, ಹೆಚ್.ಕೆ.ರಮೇಶ್, ಕ್ಷಯರೋಗ ಮೇಲ್ವಿಚಾರಕ ದೇವರಾಜು, ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಕ ದಯಾನಂದ್, ವೆಂಕಟೇಶ್, ಸಿಬ್ಬಂದಿ, ರೋಟರಿ ಸದಸ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK